ಅಧ್ಯಕ್ಷರು: ನೋಡೋಣ, ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 14 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿರ್ಧರಿಸಿತು).

(ಸದನವು 4.00 ಗಂಟೆಗೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಶ್ರೀ ಜನಾರ್ಧನರೆಡ್ಡಿ ಪ್ರಕರಣವನ್ನು ನಿಯಮ 69ರಲ್ಲಿ ಚರ್ಚಿಸಲು ಅನುಮತಿ ಕೋರಿಕೆ

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಶ್ರೀ ಎನ್. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) (ತಮ್ಮ ಸ್ಥಾನಕ್ಕೆ ತೆರಳಿ): ಈಗಾಗಲೇ ವಾಟಾಳ್ ನಾಗರಾಜ್‌ರವರು, ಮಾಧುಸ್ವಾಮಿಯವರು ಮತ್ತು ರೆಡ್ಡಿಯವರು, ನಮ್ಮ ರಾಜೇಂದ್ರನ್‌ರವರು ಮತ್ತು ಹೆಗ್ಡೆಯವರು ನಾವೆಲ್ಲರೂ ಸೇರಿ ತಮ್ಮ chamber ಗೆ ಬಂದು ಮಾತುಕತೆ ನಡೆಸಿದ್ದೇವೆ. ಆದರೆ, ತಮ್ಮ ಹೇಳಿಕೆಯ ಮೇಲೆ ನಾವೆಲ್ಲರೂ ಕೂಡ ಬಂದಿದ್ದೇವೆ ಮತ್ತು ಅದರಲ್ಲಿ ವಿಶೇಷವಾಗಿ ವಾಟಾಳ್ ನಾಗರಾಜ್, ಮಾಧುಸ್ವಾಮಿಯವರು ಎಲ್ಲರೂ ಕೂಡ ಮಾತನಾಡತಕ್ಕಂಥ ಅಭಿಪ್ರಾಯದ ಮೇರೆಗೆ ನಾವು ಮಾತುಕತೆಗೆ ಬಂದಿದ್ದೇವೆ. ನಾವು CBI enquiry ಬಗ್ಗೆ ಮತ್ತು ಈ ಒಂದು ವಿಷಯದ ಮೇಲೆ ಆಗಲೇ ಬೇಕೆಂದು ಕೇಳಿದಾಗ ಅದರ ಬಗ್ಗೆ ಅವರು ಒಪ್ಪಲಿಲ್ಲ. ಸರ್ಕಾರದವರು CBI enquiryಗೆ ಒಪ್ಪುವುದಿಲ್ಲ, judicial enquiry ಗೆ ಮಾತ್ರ BMIC ಯಲ್ಲಿ ಮತ್ತು ಇದರಲ್ಲಿ ಮಾತ್ರ ನಾವೆಂದೂ ಕೂಡ ಅದನ್ನು ಒಪ್ಪುವ ಪ್ರಶ್ನೆಯೇ ಬರುವುದಿಲ್ಲ, ನೀವೇನು ಮಾಡುತ್ತೀರಿ ನೀವು ಮಾಡಿ, ನಾವೇನು ಮಾಡಬೇಕು ಅದನ್ನು ಮಾಡುತ್ತೇವೆನ್ನತಕ್ಕಂಥ ಧಾಟಿಯಲ್ಲಿ ಮಾತನಾಡಿ ಕೊನೆಗೆ ಆ ಮಾತು ಹೆಚ್ಚು ಕಡಿಮೆ ಮುರಿದು ಹೋದ ಹಾಗೆ ಆಯಿತು. ಆದರೆ, ಈಗ ತಮ್ಮಲ್ಲಿ ನನ್ನ ಮನವಿ ಏನೆಂದರೆ, adjournment motion ಗೆ ತಾವು ಅನುಮತಿ ಕೊಡಲಿಲ್ಲ. Disallow ಮಾಡಿದಿರಿ. ಒಪ್ಪಿಕೊಳ್ಳೋಣ. ಆದರೆ, ಕನಿಷ್ಠ ಪಕ್ಷ ಆ ಒಂದು ಜನಾರ್ಧನರೆಡ್ಡಿ issue ವನ್ನು ಚರ್ಚೆ ಮಾಡುವುದಕ್ಕಾದರೂ ಅವಕಾಶ ಕೊಡಿ. Rule 69 ನಲ್ಲೇ ಅವಕಾಶ ಕೊಡಿ. ಅಷ್ಟಾದರೂ ತಾವು ಮಾಡಿದರೆ ಕನಿಷ್ಠ ಪಕ್ಷ.....

ಅಧ್ಯಕ್ಷರು: ಬೇಡಿಕೆ ಮೇಲೆ ಚರ್ಚೆ ಮಾಡಬಹುದೆಂದು ನಿನ್ನೆಯೇ ಹೇಳಿದೆನಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಕನಿಷ್ಠ ಪಕ್ಷ ಆ ಒಂದು ಚರ್ಚೆಗೆ ಆಸ್ಪದ ಕೊಟ್ಟರೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕಾಗುತ್ತದೆ. ಆಮೇಲೆ,

ಅದನ್ನು ಒಪ್ಪುವುದು, ಬಿಡುವುದು, ಅದರಲ್ಲಿ ಸತ್ಯಾಂಶವೇನು ಅಥವಾ ಸತ್ಯಕ್ಕೆ ದೂರವಾದಂಥ ಮಾತುಗಳೇನು ಅನ್ನತಕ್ಕಂಥದ್ದು ಅವರು ಹೇಳಲಿ. ಆದರೆ, ವಿಷಯವನ್ನೇ ನಾವು ಪ್ರಸ್ತಾಪ ಮಾಡದೇ ಹೋದರೆ, ಇಡೀ ರಾಜ್ಯದ ಜನ ಮತ್ತು ಹೊರಗಡೆ ಕೂಡ ಇದು ಅಬ್ಬರವಾಗಿ ಈಗಾಗಲೇ TV ಯಲ್ಲಿ, ಅದರಲ್ಲಿ ಬಹಳ ಪ್ರಚಾರವಾಗಿದೆ. ಅಂಥ ಸಂದರ್ಭದಲ್ಲಿ ನಾವು ಈ ಸದನದಲ್ಲಿ ಎಲ್ಲಾ ಸದಸ್ಯರೂ ಇದರ ಬಗ್ಗೆ ಮಾತನಾಡದೇ ಹೋದರೆ, ಬೆಳಕು ಚೆಲ್ಲದೇ ಹೋದರೆ ಜನ ಏನನ್ನುತ್ತಾರೆ? ಏನು ಒಬ್ಬರು MLC ಯವರು ಈ ರೀತಿಯಾಗಿ charge ಮಾಡಿದರೂ ಕೂಡ ಯಾರೂ ಕೇಳುವವರಿಲ್ಲ. ಅದಕ್ಕೆ ಒಬ್ಬರು MP, ಮಂತ್ರಿಗಳು consent ಕೊಟ್ಟರೂ ಕೂಡ ಅದರ ಬಗ್ಗೆ ಇಲ್ಲಿ ಒಬ್ಬರೂ ಕೂಡ ಮಾತನಾಡತಕ್ಕಂಥವರು ಇಲ್ಲ ಮತ್ತು ವಿಶೇಷವಾಗಿ 6 ದಿನಗಳಾದರೂ ಕೂಡ ಇಲ್ಲಿಯವರೆಗೆ ಯಾರು ಈ ಹೇಳಿಕೆ ಕೊಟ್ಟಿದ್ದಾರೋ ಅವರು deny ಮಾಡಿಲ್ಲ. ಅಂದಾಗ, ಏನು ಇಲ್ಲಿ ಎಲ್ಲಾ ಸದಸ್ಯರು ಬರೇ ಮೂಕಪ್ರೇಕ್ಷಕರಾಗಿ ಹೋಗಿದ್ದಾರೋ ಅಥವಾ ಈ ವಿಷಯವನ್ನು ಮುಚ್ಚಿಡಬೇಕೆಂದು ಇವರೆಲ್ಲರೂ ಕೂಡ ಮಾಡಿದ್ದಾರೋ ಎಂದು ಹೇಳಿ ಸಂಶಯ ಬರುತ್ತದೆ. ಅದಕ್ಕೆ ದಯವಿಟ್ಟು, adjournment motion ಬೇಡ. ಕನಿಷ್ಠ ಪಕ್ಷ 69ರಲ್ಲಾದರೂ ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಮ್ಮ ಅನಿಸಿಕೆಗಳನ್ನು ನಾವೂ ಹೇಳುತ್ತೇವೆ ಅವರೂ ಹೇಳುತ್ತಾರೆ. ಹೇಳಿದ ಮೇಲೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಮಜಾಯಿಷಿ ಉತ್ತರ ಕೊಡಲಿ. ಅವರೇನು ಉತ್ತರ ಕೊಡುತ್ತಾರೋ ಅವರಿಗೆ ಬಿಟ್ಟಿದ್ದು. ನಾವೇನು ಹೇಳಬೇಕು ಅದನ್ನು ನಾವು ಹೇಳುತ್ತೇವೆ. ಅದಕ್ಕೆ ದಯವಿಟ್ಟು ಈ ವಿಷಯದಲ್ಲಿ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ತಮಗೆ ನಾನು ಕೇಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನಕ್ಕೆ ತೆರಳಿ): ಈಗಾಗಲೇ ಖರ್ಗೆಯವರು ಹೇಳಿದ ಹಾಗೆ, ನಾವೆಲ್ಲರೂ ಕೂಡ ತಮ್ಮ ಕೊಠಡಿಯಲ್ಲಿ ಒಂದು ಗಂಟೆ ಕಾಲ ಸುಮಾರಾಗಿ ಚರ್ಚೆ ಮಾಡಿದ್ದೇವೆ. ನಿನ್ನೆ adjournment motion ಕೊಟ್ಟಂಥ ಕಾಲದಲ್ಲಿ ತಾವು immediate ಆಗಿ ಹೇಳಬೇಕಾಗಿತ್ತು. ಬಹಳಷ್ಟು ಸಲ ನಿಲುವಳಿ ಸೂಚನೆ ಕೊಟ್ಟ ಮೇಲೆ 69ಕ್ಕೆ ಪರಿವರ್ತನೆ ಮಾಡಿ ಅವಕಾಶ ಕೊಟ್ಟಿದ್ದೀರಿ. ಇದು ಮಹತ್ವವಾದಂಥ ವಿಷಯವಿದೆ. ತಾವು ಏನು ಮಾಡಿದಿರಿ, ಪತ್ರದ ಮುಖಾಂತರ ಇದು ಮಾಡಲಿಕ್ಕೆ ಬರುವುದಿಲ್ಲವೆಂದು ಅನ್ನತಕ್ಕಂಥದ್ದು 11 ಗಂಟೆಗೆ ಪ್ರಾರಂಭ ಆಗತಕ್ಕಂಥ ಅಧಿವೇಶನ, ತಾವು 12.20 ಗಂಟೆಗೆ ಪ್ರಾರಂಭ ಮಾಡಿದಿರಿ. ಇವತ್ತು ನಾವು ಹೇಳತಕ್ಕಂಥದ್ದು ಇಷ್ಟೆ ಏನೆಂದರೆ ಜನಾರ್ಧನ ರೆಡ್ಡಿಯವರು ಮುಖ್ಯಮಂತ್ರಿಗಳ ಮೇಲೆ ಇವತ್ತು ಒಂದು ಲಂಚದ ಅವ್ಯವಹಾರ ಅವರ ಮೇಲಾಗಲಿ ಮತ್ತೆ ಬೇರೆ ಮಂತ್ರಿಗಳ ಮೇಲೆ ಆರೋಪವೇನು ಮಾಡಿದ್ದಾರೆ, ಗುರುತರವಾದಂಥ ಆರೋಪ. ಇದರ ಬಗ್ಗೆ ಸದನದಲ್ಲಿ

ಚರ್ಚೆಯಾಗಬೇಕು. ಹೊರಗಡೆ ಏನಾಗುತ್ತಿದೆ ಎಂದರೆ, ಎಷ್ಟೋ ಬೇಡಿಕೆಗಳ ಮೇಲೆ ಚರ್ಚೆಯಾಗತಕ್ಕಂಥ ಕಾಲದಲ್ಲಿ ಸಮಯದ ಕಾಲಹರಣವಾಗುತ್ತಿದೆ. ವಿರೋಧ ಪಕ್ಷದವರಿಗೆ ಬೇಡಿಕೆ ಮೇಲೆ ಚರ್ಚೆ ಮಾಡತಕ್ಕಂಥದ್ದು ಅವರಿಗೇನೂ ಕೂಡ ಅದರ ಬಗ್ಗೆ ಇಲ್ಲ ಅನ್ನತಕ್ಕಂಥ ಮಾತೂ ಕೂಡ ಹಬ್ಬುತ್ತಿದೆ. ತಾವೇಕೆ ಹೀಗೆ ಮಾಡುತ್ತೀರಿ? ಕೊನೆಯದಾಗಿ, ಅಂತಿಮವಾಗಿ ಇದಕ್ಕೆ ಬರುತ್ತಿದ್ದೇವೆ. ಇವತ್ತು ತಾವು ನಿಲುವಳಿ ಸೂಚನೆಯಲ್ಲಿ ಇದು ಬರುವುದಿಲ್ಲವೆಂದು ಹೇಳಿದ ಮೇಲೆ ಇದನ್ನು 69ರಲ್ಲಿ ತಾವು ಪರಿವರ್ತನೆ ಮಾಡಿ ಎಲ್ಲಾ ಚರ್ಚೆಗೆ ಇವತ್ತು ಚರ್ಚೆಯಲ್ಲಿ ಭಾಗವಹಿಸತಕ್ಕಂಥ ಅವಕಾಶ ಕೊಡಬೇಕು. ಇದರಲ್ಲಿ ಸತ್ಯಾಂಶವೇನಿದೆ ಎಲ್ಲವನ್ನೂ ಕೂಡ ನಾವು ಬಹಿರಂಗ ಪಡಿಸುತ್ತೇವೆ. ಅಲ್ಲಿ ಕೂಡ ಮುಖ್ಯಮಂತ್ರಿಗಳು ಮತ್ತು ಬೇರೆ ಸಂಬಂಧಪಟ್ಟಂಥ ಮಂತ್ರಿಗಳು ಉತ್ತರ ಕೊಟ್ಟರೆ ಸದನ ಸರಿಯಾಗಿ ನಡೆಸತಕ್ಕಂಥ ರೀತಿಯಲ್ಲಿ ಆಗುತ್ತದೆ. ಇವತ್ತು ನಾವು ಬಹಳಷ್ಟು ಚರ್ಚೆಯಾದ ಮೇಲೆ ಆ ತೀರ್ಮಾನಕ್ಕೆ ಬಂದಿದ್ದೇವೆ. ಮತ್ತೆ ನಮ್ಮ ತೀರ್ಮಾನವೇನಿದೆ ಇವತ್ತು CBI ತನಿಖೆಯಾಗತಕ್ಕಂಥದ್ದು, BMIC ಯಲ್ಲಿ 11 ವರ್ಷಗಳ ಕಾಲ ಏನು ಒಂದು ಆಗಿದೆ ಅದಕ್ಕೆ ಕರ್ಮಕಾಂಡ. ಅದರ ಬಗ್ಗೆಯೂ ಆಗಬೇಕು. ಇದರ ಬಗ್ಗೆಯೂ ಕೂಡ CBI ತನಿಖೆಯಾಗಬೇಕು ಎನ್ನತಕ್ಕಂಥದ್ದು ನಮ್ಮ ಪಕ್ಷದ ಒಂದು ನಿರ್ಧಾರವಿದೆ. ಇದರ ಬಗ್ಗೆ ತಾವೇನು ತೀರ್ಮಾನ ಕೊಡುತ್ತೀರಿ, ಆ ತೀರ್ಮಾನಕ್ಕೆ ಬದ್ದರಾಗಿ ಮುಂದೆ ನಡೆಸತಕ್ಕಂಥ ರೀತಿಯಲ್ಲಿ ನಮ್ಮ ಸಹಕಾರ ಕೂಡ ಇದೆ. ಎಲ್ಲರ ಸಹಕಾರ ಇದೆ ಇವತ್ತು ಸದನ ಏಕೆ ನಡೆಯುತ್ತಿಲ್ಲವೆಂದರೆ ತಾವು ಬಹಳ ನಿಷ್ಪಕ್ಷಪಾತವಾಗಿ ಮಾಡುತ್ತೀರೋ? ಇಲ್ಲವೋ? ಅನ್ನತಕ್ಕಂಥ ಅನುಮಾನ ಕೂಡ ನಮ್ಮ ಮನಸ್ಸಿನಲ್ಲಿ ಬರುತ್ತಿದೆ. ಇದಕ್ಕೆ ಸರಿಯಾದ ರೀತಿಯಲ್ಲಿ ಮಹತ್ವದ ವಿಚಾರಗಳ ಬಗ್ಗೆ, ಗಹನವಾದ ವಿಚಾರಗಳ ಬಗ್ಗೆ ನೋಡಿಕೊಂಡು, ಪರಿಶೀಲನೆ ಮಾಡಿ ನಮಗೆ ಅವಕಾಶ ಕೊಟ್ಟಿದ್ದರೆ ಅನಾಹುತವಾಗುತ್ತಿರಲಿಲ್ಲ. ಅದಕ್ಕೆ ನಮಗೆ ಅವಕಾಶ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ಈಗ ಈ ಮನೆಯಲ್ಲಿ ಯಾವುದಾದರೊಂದು ವಿಷಯ ಪ್ರಸ್ತಾಪ ಮಾಡುವುದು, ಅದರ ಬಗ್ಗೆ ಚರ್ಚೆ ಮಾಡುವುದು ಈ ಮನೆ ಸದಸ್ಯರ ಹಕ್ಕು. ತಾವೇನು adjournment motion ಕೆಳಗೆ ತಳ್ಳಿ ಹಾಕಿದ್ದಿರಿ, ಅದು ತಮಗೆ ಬಿಟ್ಟಂಥ ಅಧಿಕಾರ ವ್ಯಾಪ್ತಿ. ನಾವು ಅದನ್ನು ಪ್ರಶ್ನೆ ಮಾಡಲಿಲ್ಲ. Rule 69ರಲ್ಲಿ ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿ ಚರ್ಚೆಯೂ ಆಗಲಿಲ್ಲ, ಸರ್ಕಾರ ಉತ್ತರವನ್ನೂ ಕೊಡಲಿಲ್ಲವೆಂದರೆ ಶಾಸನ ಸಭೆಗೆ ಗೌರವ ಬರುವಂಥ ಸ್ಥಿತಿ ಉಳಿಯುವುದಿಲ್ಲ. ದಯಮಾಡಿ, ಎಲ್ಲಾ adjournment motion ಅನ್ನೂ ತಾವು convert

ಮಾಡಿಬಿಟ್ಟಿದ್ದೀರಿ. 69ರ ಕೆಳಗೆ ಎಲ್ಲವನ್ನೂ ಚರ್ಚೆ ಮಾಡಲಿಕ್ಕೆ ತಾವೇನು ಅನುಮತಿ ಕೊಟ್ಟಿದ್ದಿರಿ. ಇದನ್ನು 69ರ ಕೆಳಗೆ ಚರ್ಚೆ ಮಾಡಲಿಕ್ಕೆ ತಾವು ಈಗ ಅವಕಾಶ ಕೊಡಬೇಕು. ಸರ್ಕಾರ ಆಮೇಲೆ ಏನು ಉತ್ತರ ಹೇಳುತ್ತದೊ ಹೇಳಲಿ. ಯಾರ್ಯಾರ ಹತ್ತಿರ ಏನೇನು ಮಾಹಿತಿ ಇದೆ ಅದು ಶಾಸನ ಸಭೆ ಮುಂದೆ ಬಂದರೆ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತದೆ. ತಾವು ಇದರಲ್ಲಿ ಮೀನಾ–ಮೇಷ ಮಾಡುವ ಅಗತ್ಯ ನಮಗೆ ಕಾಣುತ್ತಿಲ್ಲ. ತಕ್ಷಣ rule 69ರಲ್ಲಿ ಇದನ್ನು convert ಮಾಡಿ ದಯಮಾಡಿ ಎಲ್ಲಾ ಸದಸ್ಯರು ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಳ್ಳಲಿಕ್ಕೆ ಒಂದು ಅವಕಾಶವನ್ನು ತಾವು ಮಾಡಿಕೊಡಬೇಕೆಂದು ಕೇಳುತ್ತೇನೆ. ಅವರೀಗ ಒಂದು ಹೆಜ್ಜೆ ಹಿಂದೆ ಬಂದಿದ್ದಾರೆ. ಅವರೇನು ಒತ್ತಾಯ ಮಾಡಿದ್ದರು. adjournment motionನಲ್ಲೇ ಆಗಬೇಕು, Government ಮೇಲೆ, ಅಂಥವರು ಇರಲಿ ಬಿಡಿ ಎಂದು ಹೇಳಿ ನಾವೆಲ್ಲಾ ಕೇಳಿಕೊಂಡ ಮೇಲೆ ಆಯಿತು 69ರಲ್ಲೇ ಚರ್ಚೆಯಾಗಲೆಂದು ಹೇಳಿ ಪ್ರಮುಖವಾದ ವಿರೋಧ ಪಕ್ಷ ರಾಜಿಯಾಗಿ ಬಂದಿರುವುದರಿಂದ ಅದನ್ನು ಇನ್ನೂ ಮುಂದಕ್ಕೆ ಎಳೆಯುವುದು ಅಧ್ಯಕ್ಷರೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ತಾವು ತಕ್ಷಣ ಒಪ್ಪಿಕೊಂಡು 69ರ ಕೆಳಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಸರ್ಕಾರ ಶಾಸನ ಸಭೆ ನಡೆಯುವಾಗ ನೇರವಾಗಿ ಮುಖ್ಯಮಂತ್ರಿಗಳ ಮೇಲೇ ಆರೋಪಣೆ ಬಂದಿರತಕ್ಕಂಥದ್ದು. ವಿಧಾನ ಪರಿಷತ್ತಿನ ಸದಸ್ಯರಾದ ಜನಾರ್ಧನ ರೆಡ್ಡಿಯವರು ಆರೋಪ ಮಾಡಿರತಕ್ಕಂಥದ್ದು. ಈ ಸದನ ನಡೆಯುವಾಗ ನಾವು ಯಾರೂ ಕೇಳಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಯವರೇ ನೇರವಾಗಿ ಬಂದು ಅವರೇ ಈ ಸದನದಲ್ಲಿ ಒಂದು ಹೇಳಿಕೆ ಕೊಡಬೇಕು. ಯಾರು ಅವರ ಮೇಲೆ ಆರೋಪಣೆ ಮಾಡಿದ್ದಾರೆ, ಅದನ್ನು ತಳ್ಳಿ ಹಾಕುವುದಾಗಲಿ ಅಥವಾ ಸಮರ್ಥನೆ ಮಾಡುವುದಾಗಲಿ ಅಥವಾ ಯಾವುದಾದರೊಂದು ಸರ್ಕಾರ ಹೇಳಬೇಕಲ್ಲ? ಇದುವರೆಗೆ ಅದು ಹೇಳಿಯೇ ಇಲ್ಲ. ಇದು ಒಂದು. ಎರಡನೆಯದಾಗಿ, ಕೊನೆಗೆ, ನಾವು ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ. ಈ ಸದನದ ಸದಸ್ಯರು ಈ ಬಗ್ಗೆ ಏನೂ ಮಾತನಾಡಲಿಲ್ಲ ಅಂದರೆ ಎಲ್ಲಾ ಕರ್ತವ್ಯ ಲೋಪ ಮಾಡಿದ ಹಾಗಾಗುತ್ತದೆ. ಮತ್ತು ಈ ಸದನದಲ್ಲಿ ಚರ್ಚೆಯಾಗದೆ ಎಲ್ಲಿ ಚರ್ಚೆಯಾಗಬೇಕು? ಚರ್ಚೆಯಾಗಬೇಕಾದುದು ಬಹಳ ಮೂಲಭೂತವಾಗಿ ಇದೆ. ಅದಕ್ಕೆ ಎಷ್ಟೋ ವ್ಯತ್ಯಾಸಗಳೆಲ್ಲಾ ಬದಲಾವಣೆಯಾಗಿ ಕೊನೆಗೊಂದು ಹಂತಕ್ಕೆ ಬಂದು ತಮ್ಮ ಕಾರ್ಯಾಲಯದಲ್ಲಿ ತಾವು 2–3 ಸಭೆಗಳನ್ನು ಕರೆದು ನಿಮ್ಮ ಜೊತೆಯಲ್ಲಿ ಮಾತನಾಡಿದ್ದಾಯಿತು, ಸಂಸದೀಯ ವ್ಯವಹಾರಗಳ ಸಚಿವರ ಜೊತೆಯಲ್ಲಿ ಮಾತನಾಡಿದ್ದಾಯಿತು, ಉಪ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದಾಯಿತು.

ಅಂತಿಮವಾಗಿ, ಈ ಸದನ ತಮ್ಮ ಕೈಯಲ್ಲಿದೆ. ಈ ಸದನ ನಡೆಸತಕ್ಕಂಥದ್ದು ಯಾವ್ಯಾವ ಇದರಲ್ಲಿ ನಡೆಸಬೇಕೆನ್ನುವುದು ನಿಮ್ಮ ಕೈಯಲ್ಲಿದೆ. ನೀವು ಯಾವಾಗ ನಿಲುವಳಿ ಸೂಚನೆಯನ್ನು ನೇರವಾಗಿ ತಳ್ಳಿ ಹಾಕಿದಾಗ ಮುಂದೆ ಉಳಿದಿರುವುದು ನಿಯಮ 69. ಅದನ್ನು ನೀವೇ ಹೇಳಬಹುದಾಗಿತ್ತು. ಸರ್ಕಾರದವರೇನೂ ಹೇಳಬೇಕಾಗಿಲ್ಲ. ನೀವೇ ಹೇಳಬಹುದಾಗಿತ್ತು. ಈಗ ಸರ್ಕಾರ ಈ ಚರ್ಚೆಗೆ ಅವಕಾಶ ಕೊಡದೇ ಇದನ್ನು ಮುಚ್ಚಿಟ್ಟಿದ್ದಾರೆಂಬುವ ಭಾವನೆ ನಾಳೆ ಸರ್ಕಾರದ ಮೇಲೆ ಬರುತ್ತದೆ. ಸರ್ಕಾರದ ಮೇಲೆ ನಾಳೆ ನೇರವಾಗಿ ಚರ್ಚೆ ಏಕೆ ಮುಚ್ಚಿಡುತ್ತಿದ್ದಾರೆ? ಕಾರಣವೇನು ಎನ್ನುವ ಗುಮಾನಿ ಬೇರೆ ಬರುತ್ತದೆ. ಈ ಆಪಾದನೆಯನ್ನು ಅವರೇ ಹೊರಬೇಕಾಗುತ್ತದೆ. ಆದ್ದರಿಂದ, ಅವರು ನೇರವಾಗಿ ಯಾರ್ಯಾರ ಮೇಲೆ ಜನಾರ್ಧನ ರೆಡ್ಡಿಯವರು ಆರೋಪಣೆ ಮಾಡಿದ್ದಾರೆ, ಅವರು ಬಹಿರಂಗವಾಗಿ ಅದನ್ನು ಸರ್ಕಾರ ಇಲ್ಲ ಸಮರ್ಥನೆ ಮಾಡಬೇಕು ಇಲ್ಲ ಒಪ್ಪಿಕೊಳ್ಳಬೇಕು. ಎರಡೇ ಉಳಿದಿರತಕ್ಕಂಥದ್ದು. ಅದಕ್ಕೆ ಅವಕಾಶವಿರುವುದು 69ರ ಪ್ರಕಾರ ಚರ್ಚೆ ಮತ್ತು ಜನಾರ್ಧನ ರೆಡ್ಡಿಯವರಿಗೆ ನಾನು ಈ ಮೂಲಕ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ಹೊರಗಡೆ ನೀವು ಹೇಳಿಕೆ ಕೊಡತಕ್ಕಂಥದ್ದು ಒಂದು ವಿಚಾರವಾದರೆ, ನೀವು ವಿಧಾನ ಪರಿಷತ್ ಸದಸ್ಯರಾಗಿದ್ದೀರಿ, ತಾವು ವಿಧಾನ ಪರಿಷತ್ತಿಗೆ ನಾಳೆ ನೀವು ಎಲ್ಲಿದ್ದರೂ ಬನ್ನಿ, ವಿಧಾನ ಪರಿಷತ್ತಿನಲ್ಲಿ ನೀವೇನು ಹೇಳುತ್ತೀರಿ ಅದನ್ನು ಆ ಹೇಳಿಕೆಯನ್ನು ನೀವು ಅಲ್ಲಿ ಹೇಳಿ ಎನ್ನತಕ್ಕಂಥದ್ದನ್ನು ಈ ಮೂಲಕ ನಾನು ಅವರಿಗೆ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಆದ್ದರಿಂದ, 69ರ ಪ್ರಕಾರ ಚರ್ಚೆ ಮಾಡುವುದಕ್ಕೆ ಈ ಸದನಕ್ಕೆ ಹಕ್ಕಿದೆ ಮತ್ತು ಅವರು ಹಟವಾಗಿ ಇದ್ದಂಥ ವಿಚಾರದಲ್ಲಿ ಬದಲಾವಣೆಯಾಗಿದ್ದಾರೆ. ಆಗಿ ಏನು ಅವರು ಕೇಳುತ್ತಿರುವುದು; ನಾವು ಕೇಳುತ್ತಿರುವುದೇನು? ಇವತ್ತು ನಾವೆಲ್ಲಾ ಒಟ್ಟಾಗಿದ್ದೇವೆ. ನಿನ್ನೆ ಅವರು ಸಹಿ ತೆಗೆದುಕೊಂಡಿರಲಿಲ್ಲ, ಇವತ್ತು ನಾವೆಲ್ಲಾ ಒಟ್ಟಾಗಿದ್ದೇವೆ, ಈ ತೀರ್ಮಾನದಲ್ಲಿ ಹೇಳುವುದಾದರೆ, ಇದಕ್ಕೆ ಒಪ್ಪಲಿಲ್ಲವೆಂದರೆ ನಾವೂ ಧರಣಕ್ಕೆ ಬರಬೇಕಾಗುತ್ತದೆ, ಆ ಪರಿಸ್ಥಿತಿ ನಿರ್ಮಾಣವಾಗಿದೆ, ದಯಮಾಡಿ ನಿಯಮ 69ರ ಪ್ರಕಾರ ತಾವು ಚರ್ಚೆಗೆ ಅವಕಾಶ ಕೊಡುವುದಕ್ಕೆ ತಮಗೆ ನೇರವಾಗಿ ಅಧಿಕಾರ ಇದೆ, ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಗ್ಗೆ ಸಭೆ ಸೇರಿದ ತಕ್ಷಣ ನಿನ್ನೆ ಪರಿಸ್ಥಿತಿಯೇ ಮುಂದುವರಿಯಿತು, ನಾನು ಮಾಧುಸ್ವಾಮಿಯವರು ವಾಟಾಳ್ ನಾಗರಾಜ್‌ರವರು, ರಾಜೇಂದ್ರನ್‌ರವರು, ಹೆಗ್ಡೆಯವರು ಎಲ್ಲರೂ ಸೇರಿ ತಮ್ಮಲ್ಲಿ ವಿನಂತಿಸಿಕೊಂಡು ತಮ್ಮ ಕೊಠಡಿಗೆ ಕರೆದು ಮಾತುಕತೆ ಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು ಕರ್ನಾಟಕ ರಾಜ್ಯದ ಜನತೆ ಇವತ್ತು

ನಮ್ಮನ್ನು ನೋಡುತ್ತಿದ್ದಾರೆ, ಬೇಡಿಕೆಗಳ ಮೇಲೆ ಚರ್ಚೆಯಾಗಬೇಕು, 45 ಸಾವಿರ ಕೋಟಿ ರೂಪಾಯಿಗಳನ್ನು ಚರ್ಚೆಯಿಲ್ಲದೆ ಅನುಮೋದನೆ ಕೊಡತಕ್ಕಂಥ ಸ್ಥಿತಿ ಈ ಸದನದಲ್ಲಿ ನಿರ್ಮಾಣ ಆಗಬಾರದು. ಆ ರೀತಿ ಆದರೆ ಇಡೀ ಪ್ರಜಾಪ್ರಭುತ್ವಕ್ಕೆ ಮತ್ತು ಜನತೆಗೆ ಮಾಡಿದ ದ್ರೋಹ ಆಗುತ್ತದೆ ಎನ್ನುವ ದೃಷ್ಟಿಯಲ್ಲಿ ತಮ್ಮನ್ನು ಮನವೊಲಿಸಿ, ತಮ್ಮ ಕಛೇರಿಯಲ್ಲಿ ಸಭೆಯನ್ನು ನಡೆಸಿದೆವು. ಅಲ್ಲಿ ಎಲ್ಲಾ ವಿಷಯಗಳು ಚರ್ಚೆಯಾಯಿತು, ಚರ್ಚೆಯಾದ ಮೇಲೆ ಕಾಂಗ್ರೆಸ್ ಮುಖಂಡರು ನಾವು ಮಾತನಾಡಿಕೊಂಡು ಹೇಳುತ್ತೇವೆಂದು ಹೇಳಿದರು, ನಮ್ಮನ್ನೂ ಕೂಡ ಕರೆದರು, ನಾವೂ ಕೂಡ ಹೋದೆವು, ನಾವು ಅಲ್ಲಿಗೆ ಹೋಗಿ ಎಲ್ಲಾ ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬಂದೆವು. ನಿಲುವಳಿ ಸೂಚನೆಯನ್ನು ತಾವು ತಿರಸ್ಕಾರ ಮಾಡಿದಿರಿ, ಮತ್ತೆ ಅದನ್ನು ಮೂವ್ ಮಾಡತಕ್ಕಂಥದ್ದು ಬೇಡ, ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ಮಾಡಿ ಕೊಡಬೇಕೆಂದು ಅಲ್ಲಿ ಎಲ್ಲರೂ ಒಪ್ಪಿಗೆಗೆ ಬಂದ ಮೇಲೆ ನಾವು ನಿಮ್ಮ ಹತ್ತಿರ ಬಂದು, ವಿಚಾರವನ್ನು ಪ್ರಸ್ತಾಪ ಮಾಡಿದೆವು. 69ರ ನಿಯಮದಡಿ ಅವರು ಚರ್ಚೆ ಮಾಡಲಿಕ್ಕೆ ಒಪ್ಪಿದ್ದಾರೆ, ನೀವೂ ಕೂಡ ಅದಕ್ಕೆ ಅನುಮತಿ ಕೊಡಬೇಕೆಂದು ಹೇಳಿದೆವು. ಏಕೆ, ಚರ್ಚೆಯಾಗಬೇಕೆಂದು ನಾವು ಕೇಳುತ್ತಿದ್ದೇವೆಂದರೆ, ಸರ್ಕಾರವನ್ನು ನಡೆಸತಕ್ಕಂಥ ಮುಖ್ಯಸ್ಥರ ಮೇಲೆ ಬಹಳ ಗಂಭೀರವಾದ ಒಂದು ಆಪಾದನೆ ಬಂದಿದೆ. ಅದು ನಿಜವೋ ಸುಳ್ಳೋ ಅದು ಕರ್ನಾಟಕ ರಾಜ್ಯದ ಜನತೆಗೆ ಗೊತ್ತಾಗಬೇಕಾಗುತ್ತದೆ. ಏಕೆಂದರೆ, ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಯಾರೋ ದುಡ್ಡು ವಸೂಲಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಇದು ಒಂದು ಕಡೆಯ ವಾದ ಇದೆ. ಮತ್ತೊಂದು ಕಡೆ ಮುಖ್ಯಮಂತ್ರಿಗಳ ಮೇಲೆಯೇ ನೇರವಾಗಿ ಆಪಾದನೆ ಇದೆ, ಇದರಲ್ಲಿ ಯಾವುದು ಸತ್ಯ ಎನ್ನತಕ್ಕಂಥದ್ದನ್ನು ಕರ್ನಾಟಕ ರಾಜ್ಯದ ಜನತೆಗೆ ತಿಳಿಸಪಡಿಸತಕ್ಕಂಥ ಜವಾಬ್ದಾರಿ ಈ ಸದನದ ಸದಸ್ಯರಾಗಿರತಕ್ಕಂಥ ನಮ್ಮೆಲ್ಲರಿಗೂ ಇದೆ. ಹೀಗಾಗಿ ನಾವು ಹೇಳತಕ್ಕಂಥದ್ದು, ಚರ್ಚೆಯಾಗಲಿ ಏನು ಇದೆ, ಯಾರ್ಯಾರ ಹತ್ತಿರ ಏನೇನು ದಾಖಲೆಗಳು ಇವೆ, ಸಂಬಂಧಪಟ್ಟಂಥವರು ಆ ದಾಖಲೆಗಳನ್ನು ಸದನದ ಮುಂದೆ ಅಥವಾ ಅಧ್ಯಕ್ಷರ ಮುಖೇನ ಅವರು ಕೊಡಲಿ, ಚರ್ಚೆಯಾಗಲಿ. ಏಕೆಂದರೆ, ಆಪಾದನೆ ಮಾಡಿರತಕ್ಕಂಥ ಮನುಷ್ಯರೊಬ್ಬರು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಮೇಲ್ಮನೆ ಸದಸ್ಯರು. ಅವರಿಗೆ ವೇದಿಕೆ ಇತ್ತು, ಸದನದಲ್ಲಿ ಚರ್ಚೆ ಮಾಡಬಹುದಾಗಿತ್ತು, ಏಕೆ ಅವರು ಆಚೆಕಡೆ ಮಾಡಿದರು, ಇದುವರೆವಿಗೂ ಏಕೆ ಸದನಕ್ಕೆ ಬಂದಿಲ್ಲ ಇವೆಲ್ಲವೂ ಪ್ರಶ್ನೆಗಳೇ ಹೀಗಾಗಿ ದಯವಿಟ್ಟು ತಾವು ಈ ಪರಿಸ್ಥಿತಿಯನ್ನು ತಪ್ಪಿಸಿ, 45 ಸಾವಿರ ಕೋಟಿ ರೂಪಾಯಿ ಬೇಡಿಕೆಗಳ ಮೇಲೆ ಚರ್ಚೆ ಈ ಸದನದಲ್ಲಿ ಆಗಬೇಕಾಗಿದೆ. ಅದನ್ನು ತಪ್ಪಿಸಬಾರದು, ತಪ್ಪಿಸಿದರೆ ಕೆಟ್ಟ ಸಂಪ್ರದಾಯವಾಗುತ್ತದೆ, ಯಾವುದೇ ಚರ್ಚೆ ಇಲ್ಲದೆ 45 ಸಾವಿರ ಕೋಟಿ

ರೂಪಾಯಿಗಳ ಬಜೆಟ್‌ನ್ನು ನಿಮಗೆ ಮಂಜೂರು ಮಾಡಿ ಕೊಡಲಿಕ್ಕೆ ನಾವು ಸಿದ್ದರಿಲ್ಲ. ಹೀಗಾಗಿ ದಯವಿಟ್ಟು ಆ ಮುಖ್ಯವಾದ ಕೆಲಸ ಆಗಬೇಕಾದರೆ ನೀವು ಸರ್ಕಾರದವರು ಒಂದು ಹೆಜ್ಜೆ ಮುಂದೆ ಬರಬೇಕು, ಬಂದು ನಿಯಮ 69ರೊಳಗೆ ಚರ್ಚೆ ಮಾಡಲಿಕ್ಕೆ ನಮ್ಮ ಮಿತ್ರರು ಒಪ್ಪಿಕೊಂಡಿದ್ದಾರೆ, ಅದಕ್ಕೆ ನೀವೂ ಕೂಡ ಸಹಮತವನ್ನು ವ್ಯಕ್ತಪಡಿಸಿ ನಿಯಮ 69ರೊಳಗಡೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್): ಮಾನ್ಯ ಅಧ್ಯಕ್ಷರೆ, ಈಗೇನು ಜನಾರ್ಧನ ರೆಡ್ಡಿಯವರು 150 ಕೋಟಿ ರೂಪಾಯಿ ಎಂದು ಅಥೆಂಟಿಕ್ ಆಗಿ ಅನೌನ್ಸ್ ಮಾಡಿ ಇಷ್ಟು ದುಡ್ಡು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ, ಅದರ ಬಗ್ಗೆ ರೂಲ್ಸ್ 69ನ ಮೇಲೆ ನಾವು ವಿಚಾರಣೆ ಮಾಡಬೇಕು, ಅದನ್ನು ಡಿಡಿನಲ್ಲಿ ಕೊಟ್ಟರೋ, ಚೆಕ್ ಕೊಟ್ಟರೋ, 500 ರೂಪಾಯಿ ನೋಟಿನ ಕಂತೆಯನ್ನು ಕೊಟ್ಟರೋ, ಸಾವಿರ ರೂಪಾಯಿ ನೋಟಿನ ಕಂತೆಯೋ, ನೂರು ರೂಪಾಯಿ ನೋಟಿನ ಕಂತೆಯೋ, ಫಿಕ್ಸ್ ಮಾಡಿ ಕೊಟ್ಟಿದ್ದಾರೋ ಇಲ್ಲವೇ ಎಲ್ಲೋ ಯಾವುದೋ ಒಂದು ಬಂಡಲ್‌ನಲ್ಲಿ ಕಡಿಮೆಯಾಗಿದೆಯೋ, ಇದೆಲ್ಲಾ ವಿಚಾರಣೆ ಮಾಡಲೇಬೇಕು, straight away 150 ಕೋಟಿ ರೂಪಾಯಿ ಕೊಟ್ಟರೂ ಎಂದರೆ ಹೇಗೆ ಕೊಟ್ಟರು? ಅದರಲ್ಲಿ ಕಾಯಿನ್ಸ್ ಎಷ್ಟು? ಹತ್ತು ಹತ್ತು ರೂಪಾಯಿ ಎಷ್ಟು ಇದ್ದವು? ಕೌಂಟರ್‌ಪಿಟ್ಸ್ ನೋಟುಗಳು ಅದರಲ್ಲಿ ಏನಾದರೂ ಇದ್ದವೋ? ಇದೆಲ್ಲವನ್ನೂ ನೋಡಬೇಕು, ಆದುದರಿಂದ, ಇದರ ಮೇಲೆ ಒಳ್ಳೆಯ ಚರ್ಚೆ ಮಾಡಲೇಬೇಕು. ಜನಕ್ಕೆ ಗೊತ್ತಾಗಬೇಕು, ನಮ್ಮ ಮುಖ್ಯಮಂತ್ರಿಗಳು ಆ ರೀತಿ ಇಲ್ಲವೆಂದು ಹೇಳಲಿಕ್ಕೆ ಅವರಿಗೂ ಅವಕಾಶವನ್ನು ಕೊಡಬೇಕು, ಆದುದರಿಂದ ರೂಲ್ಸ್ 69ನ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ನನ್ನದೂ ಸಹ ಹಾಗೆಯೇ ಜಾಸ್ತಿ ಹೇಳುವುದಕ್ಕಿಂತ ಇದೇ ಮಾತನ್ನು ಹೇಳುತ್ತೇನೆ. ಬಹಳ ಗುರುತರವಾದ ಆಪಾದನೆಯನ್ನು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಹಾಗೂ ಅರಣ್ಯ ಸಚಿವರ ಮೇಲೆ ಆಗಿದೆ ಎನ್ನುವಂಥ ಆಪಾದನೆಯನ್ನು ಮಾಡಿದ್ದಾರೆ. ಇದನ್ನು ಸದನದಲ್ಲಿ ಚರ್ಚೆಯಾಗದೇ ಬಿಟ್ಟರೆ ಅದು ಶಾಶ್ವತವಾಗಿ ಜನರ ಮನಸ್ಸಿನಲ್ಲಿ ಏನೋ ಆಗಿದೆ ಎಂದು ಉಳಿದುಕೊಳ್ಳುತ್ತದೆ, ಇದು ಒಂದು ಕಡೆ, ಎರಡನೇಯದಾಗಿ, ನಮಗೂ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು, ಅದೇ ರೀತಿ ಅವರಿಗೂ ಕೂಡ ಉತ್ತರ ಹೇಳುವುದಕ್ಕೆ ಅವಕಾಶ ಕೊಡಬೇಕು. ಆದುದರಿಂದ, ಇದರ ಬಗ್ಗೆ ಚರ್ಚೆಯಾಗಲಿಕ್ಕೆ ಬೇಕು, ನಿಲುವಳಿ ಸೂಚನೆಯನ್ನು ತಾವು ತಳ್ಳಿ ಹಾಕಿರುವುದರಿಂದ, ಇದನ್ನು ಬೇರೆ ಯಾವುದಾದರೂ ರೂಪದಲ್ಲಿ ನಿಯಮ 69ಕ್ಕೆ ಪರಿವರ್ತನೆ ಮಾಡಿ ಚರ್ಚೆಗೆ ಅವಕಾಶವನ್ನು ಕೊಡಬೇಕು, ನಮಗೆ ಎಲ್ಲ

ಅವಕಾಶ ಕೊಡಿ ನಂತರ ಸರ್ಕಾರದವರು ಉತ್ತರ ಹೇಳಲಿ, ನಾವು ಈಗ ಅಂಗ ಪಕ್ಷ ಎಂದು ಹೇಳುವುದಿಲ್ಲ. ಆಪಾದನೆ ಮಾಡಿರುವಂಥದ್ದು ಆಡಳಿತ ಪಕ್ಷದ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಅದರ ಜೊತೆಯಲ್ಲಿ ಇದ್ದಂಥದ್ದು ಮಂತ್ರಿಗಳು, ಅದರೊಟ್ಟಿಗೆ ಸಂಸದರು ಸಮರ್ಥನೆ ಮಾಡಿಕೊಂಡಿದ್ದಾರೆ, ಅದರ ಬಗ್ಗೆ 69ರಲ್ಲಿ ಚರ್ಚೆಯಾಗುವಾಗ ನಾವೆಲ್ಲರೂ ಮಾತನಾಡುತ್ತೇವೆ, ದಯವಿಟ್ಟು ನಿಯಮ 69ರಡಿಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಹತ್ತಿರ ಕೋರುತ್ತೇನೆ.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೇ, ಪ್ರತಿ ಸಲ ಯಾವುದೇ ವಿಷಯ ಬಂದರೂ ನಿಯಮ 69ರಲ್ಲಿ ಚರ್ಚೆ ಮಾಡೋಣ ಎಂದು ತಾವು ತಳ್ಳಿ ಹಾಕುತ್ತೀರಿ. ಎಷ್ಟೋ ವಿಷಯಗಳು ಅನ್ ಇಂಪಾರ್ಟ್‌ಂಟ್ ವಿಷಯಗಳ ಬಗ್ಗೆ ಕೂಡ 69ರಲ್ಲಿ ಚರ್ಚೆ ಮಾಡೋಣ ಎಂದು ಹೇಳುತ್ತೀರಿ. ಇದು ಬಹಳ ಪ್ರಮುಖವಾದ ವಿಷಯ. ಇದರ ಮೇಲೆ ತಾವು 69ರಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು, ಇಲ್ಲದೇ ಇದ್ದರೆ, ಇದು ಒಂದು ಬ್ಲ್ಯಾಕ್ ಸ್ಪಾಟ್. ನಮ್ಮ ಸ್ಪೀಕರ್‌ರವರ ಮೇಲೆ ಬರುತ್ತದೆ. ಕರ್ನಾಟಕದ ಇತಿಹಾಸದಲ್ಲಿ ಇಡೀ ದೇಶದಲ್ಲಿ ಈ ರೀತಿ ಬರುತ್ತದೆ, ಆ ದೃಷ್ಟಿಯಿಂದ ತಾವು ದಯಮಾಡಿ ಚರ್ಚೆಗೆ ಅನುವು ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ನಿಯಮ 69ರಲ್ಲಿ ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಚರ್ಚೆಯಾಗಿ ಸಾಕಷ್ಟು ವಿಷಯಗಳ ಬಗ್ಗೆ ಬೆಳಕು ಚೆಲ್ಲುವಂಥ ಅವಶ್ಯಕತೆ ಇದೆ, ಇಡೀ ರಾಜ್ಯದ ಜನ ಇದನ್ನು ನೋಡುತ್ತಿದ್ದಾರೆ, ಈ ಹಿನ್ನೆಲೆಯಲ್ಲಿ ದಯವಿಟ್ಟು ಹಿಂದೆ ಕೂಡ ಅನೇಕ ಮುಖ್ಯಮಂತ್ರಿಗಳ ಮೇಲೆ ಆಪಾದನೆಗಳು ಬಂದಿವೆ, ಯಾವತ್ತೂ ಕೂಡ 69 ಆಗಲಿ ಮತ್ತೊಂದು ಆಗಲಿ ಯಾವುದೂ ಅವಕಾಶವಾಗಲಿಲ್ಲ. ಇವತ್ತೇನು ಚರ್ಚೆ ಮಾಡಲಿಕ್ಕೆ ಯಾರೇನೂ ಹೆದರುವುದಿಲ್ಲ. ಆದರೆ, ಅನಾವಶ್ಯಕವಾಗಿ ಕಾಲ ವಿಳಂಬ ಮಾಡಿ, ಇಡೀ ವಾರ, ಇಡೀ ಕರ್ನಾಟಕದ ರಾಜ್ಯದ ಜನ ಈ ಕಾಂಗ್ರೆಸ್‌ನವರು ವಿರೋಧ ಪಕ್ಷದವರು ಈ ಸ್ಥಾನದಲ್ಲಿ ಕುಳಿತಾಗ ಈ ರೀತಿ ವರ್ತನೆ ಮಾಡುತ್ತಿದ್ದಾರೆಂದು ಅತ್ಯಂತ ಹೇಸಿಗೆಯಿಂದ ಮಾತನಾಡುತ್ತಿದ್ದಾರೆ. ಆದುದರಿಂದ, ನೀವು ದೇಶ ಆಳಿದವರು, ಬಹಳ ಅನುಭವಸ್ಥರು, ಬಹಳ ಬಹಳ ಅಧಿಕಾರ ಸ್ಥಾನದಲ್ಲಿದ್ದಂಥವರು ಇದ್ದಾರೆ. ದಯವಿಟ್ಟು ಇವರು ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ಬೇರೆ ಬೇರೆ ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು, ಇನ್ನು ಕೇವಲ ಇರುವುದು ಎರಡು ದಿವಸ.....

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಆಯವ್ಯಯದಲ್ಲಿ 150 ಕೋಟಿ ರೂಪಾಯಿ ಜನಾರ್ಧನ ರೆಡ್ಡಿಯವರು ಕೊಟ್ಟಿರುವಂಥದ್ದು ಬರುವುದಿಲ್ಲ. ಅದನ್ನು ಮಾನ್ಯ ಯಡಿಯೂರಪ್ಪನವರ ಆಯವ್ಯಯದಲ್ಲಿ ಮಂಡಿಸಿಲ್ಲ, 150 ಕೋಟಿ ರೂ. ಕೊಟ್ಟಿದ್ದಾರೆಂದು ಅದನ್ನು ಹೇಳಿಲ್ಲ... ಅದು ಖಂಡಿತ ಬರುವುದಿಲ್ಲ.....

(ಅಡಚಣೆ)

ಸಭಾಧ್ಯಕ್ಷರು: ಅವರೇನು ಹೇಳುತ್ತಾರೆ ಎಂಬುದನ್ನು ಕೇಳಿ..

ಶ್ರೀ ಆರಗ ಜ್ಞಾನೇಂದ್ರ: ಅನೇಕ ವಿಚಾರಗಳ ಮೇಲೆ ಬೆಳಕು ಚೆಲ್ಲುವುದಕ್ಕೆ ಅವಕಾಶ ಇದೆ. ಮೈನಿಂಗ್ ಸಬ್ಜೆಕ್ಟ್ ಮೇಲೆ ಮಾತನಾಡಲಿಕ್ಕೆ ವಿಷಯ ಇದೆ, ಸಾಕಷ್ಟು ಇವರು ಬೆಳಕು ಚೆಲ್ಲಬಹುದು, ಆಧಾರಗಳನ್ನು ಕೊಡಬಹುದು, ನಮ್ಮ ಸರ್ಕಾರದ ಮಂತ್ರಿಗಳನ್ನು ತುದಿಗಾಲ ಮೇಲೆ ನಿಲ್ಲಿಸಲಿಕ್ಕೆ ಎಲ್ಲಾ ಅವಕಾಶಗಳು ಇವೆ. ಜೊತೆಗೆ ಅವರು experienced ಇದ್ದಾರೆ. ಬಹಳ ಒಳ್ಳೆಯ ಕಸುಬುದಾರಿಗಳು, ಎಲ್ಲಾ ಕೆಲಸಗಳನ್ನು ಮಾಡಿ ನುರಿತಂಥವರು ಅಲ್ಲಿ ಇದ್ದಾರೆ, ಹೀಗಾಗಿ ಅವರಿಗೆ ಕಸುಬುದಾರಿಗಳು, ಈ ಭ್ರಷ್ಟಚಾರ ಅದು ಇದು ಅವರಿಗೆ ಗೊತ್ತಿಲ್ಲದೇ ಇರುವ ವಿಷಯ ಏನಲ್ಲ. ಆದುದರಿಂದ, ಕಸುಬುದಾರಿಗಳು ಅಲ್ಲಿ ಇರುವುದರಿಂದ ಬೆಳಕು ಚೆಲ್ಲುವುದಕ್ಕೆ ಸಾಕಷ್ಟು ಅವಕಾಶಗಳು ಇವೆ. ಈ ಮನೆಯ ಸಮಯವನ್ನು ಈ ರೀತಿಯಾಗಿ ವ್ಯರ್ಥ ಮಾಡಬಾರದು. ನಾವು ಅಲ್ಲಿ ವಿರೋಧ ಪಕ್ಷದಲ್ಲಿ ಅನೇಕ ಸಾರಿ ಇದ್ದಾಗ ಬಾವಿಗೆ ಬಂದಾಗಲೂ ಕೂಡ ಅವರು ಬಹಳ ಕೆಟ್ಟದಾಗಿ ನಡೆದುಕೊಂಡಿದ್ದರು. ನಾವು ನಿಜವಾದಂಥ ವಿಚಾರವನ್ನು ಚರ್ಚೆ ಮಾಡಬೇಕು ಎಂದಾಗಲೂ ಆವತ್ತು ಅವರು ಆಡಳಿತದಲ್ಲಿರುವಂಥವರು, ನಮ್ಮನ್ನು ಮೂದಲಿಸಿದ್ದರು. ಆದರೆ ಇವತ್ತು ಅನಾವಶ್ಯಕವಾದ ವಿಚಾರಕೋಸ್ಕರ ಪತ್ರಿಕೆಯಲ್ಲಿ, ಹೊರಗಡೆ ಹೇಳಿರುವ ವಿಚಾರಕ್ಕೆ ಸದನದ ಒಳಗಡೆ ಸಮಯ ಹಾಳುಮಾಡುವಂಥ ಪ್ರಯತ್ನಗಳನ್ನು ಇವತ್ತು ಮಾಡುತ್ತಿದ್ದಾರೆ. ಮೇಲ್ಮನೆ ಸದಸ್ಯರು ಹೇಳಿದರೆ, ಮೇಲ್ಮನೆಯಲ್ಲಿ ಮುಖ್ಯಮಂತ್ರಿಗಳಿಗೆ ಹೇಳಿಕೆ ಕೊಡಲಿಕ್ಕೆ ವೇದಿಕೆ ಇದೆ. ಮತ್ತೆ ಸದಸ್ಯರಿಗೂ ಕೂಡ ಆಧಾರಗಳನ್ನು ಕೊಡುವುದಕ್ಕೆ ಅವಕಾಶ ಇದೆ. ಜೊತೆಗೆ ಮೇಲ್ಮನೆಯಲ್ಲಿ ಆ ಸದಸ್ಯರೂ ಇದ್ದಾರೆ. ಬಹಳ ಕೇಪಬಿಲಿಟಿ ಇರುವಂಥವರು ಅಲ್ಲಿ ಇದ್ದಾರೆ, ಅವರ ಹತ್ತಿರ ಏನಾದರೂ ಆಧಾರಗಳು ಇದ್ದರೆ, ಅಲ್ಲಿ ಸಾಬೀತು ಮಾಡಲಿ, ಅದನ್ನು ಚರ್ಚೆ ಮಾಡಲಿ, ಇಡೀ ರಾಜ್ಯದ ಜನಕ್ಕೆ ಮೇಸೇಜನ್ನು ಕಳುಹಿಸಲಿ, ಸಾಕಷ್ಟು ಅವಕಾಶಗಳು ಇದೆ. ಆದುದರಿಂದ, ಆ ರೀತಿ ಅದನ್ನು ಉಪಯೋಗಿಸಬೇಕೇ ವಿನಃ ಈ ರೀತಿ ಬಹಳ experienced ಇರುವಂಥವರು ಈ ದೇಶವನ್ನು ಹಾಗೂ ಈ ನಾಡನ್ನು ಆಳಿರತಕ್ಕಂಥ ಅನುಭವ ಇರತಕ್ಕಂಥ ಅವರೆಲ್ಲರೂ ಸೇರಿ ಈ ರೀತಿಯಾಗಿ ಸದನದ ಸಮಯವನ್ನು ಹಾಳು ಮಾಡುವಂಥದ್ದು

ಅವರಿಗೆ ಶೋಭೆ ತರತಕ್ಕಂಥ ವಿಚಾರವಲ್ಲ. ಮುಖ್ಯಮಂತ್ರಿಗಳಾಗಿದ್ದಂಥವರು ಇವತ್ತು ಬಾವಿಯಲ್ಲಿ ನಿಂತಿದ್ದಾರೆ, ನನಗೆ ಬಹಳ ಬೇಜಾರಾಗಿದೆ, ಮಾನ್ಯ ಧರ್ಮಸಿಂಗ್ ಅವರಿಗಿದ್ದಂಥ ಎಕ್ಸ್‌ಪೀರಿಯೆನ್ಸ್ ಆಧಾರದ ಮೇಲೆ ನಮ್ಮ ಮಾಜಿ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಬೆಳಕು ಚೆಲ್ಲಬಹುದು.

ಶ್ರೀ ಆರಗ ಜ್ಞಾನೇಂದ್ರ: (ಮುಂದು)

ನಮ್ಮ ಮಾಜಿ ಮುಖ್ಯಮಂತ್ರಿಗಳು ತಮ್ಮ ಅನುಭವದ ಆಧಾರದ ಮೇಲೆ ಹೇಳಬಹುದು.

ಶ್ರೀ ಎಸ್. ಶಿವಣ್ಣ: ಅವರ 58 ವರ್ಷದ ಅನುಭವ ಅವರಿಗೆ ಇದೆ.

ಶ್ರೀ ಆರಗ ಜ್ಞಾನೇಂದ್ರ: ಅವರಿಗೆ ಇರತಕ್ಕಂಥ ಒಂದು ಅನುಭವದಲ್ಲಿ ಇದರ ಬಗ್ಗೆ ಚೆನ್ನಾಗಿ ಬೆಳಕು ಚೆಲ್ಲಬಹುದು. ಮಾಜಿ ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ಧರ್ಮಸಿಂಗ್‌ರವರಿಗೆ ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಇವರೆಲ್ಲಾ ಸೇರಿ ಹೊಂಡಕ್ಕೆ ಹಾಕಿದ್ದಾರೆ. ಈ ಸದನದ ವಿರೋಧ ಪಕ್ಷದ ನಾಯಕನಾಗಿ ಮತ್ತು ಅತ್ಯಂತ ಸಮರ್ಥವಾಗಿ ಕೆಲಸ ಮಾಡುವಂಥ ಎಲ್ಲಾ ಶಕ್ತಿ ಅವರಿಗೆ ನಿಜವಾಗಿಯೂ ಕೂಡ ಇವತ್ತಿನ ದಿವಸ ಇದೆ. ಆದ್ದರಿಂದ ಆ ಶಕ್ತಿಯನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಇವರೆಲ್ಲರೂ ಅವರಿಗೆ ಅವಕಾಶ ಕೊಡಬೇಕು. ಮತ್ತೆ ಅವರ ಪಕ್ಷದಲ್ಲಿರತಕ್ಕಂಥ ಈ ದಂದ್ವವನ್ನು ಅಂದರೆ, ಅವರ ಪಕ್ಷದಲ್ಲಿ ಈ ಒಂದು ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಇವತ್ತಿನ ದಿವಸ ಕಾಂಪಿಟೇಶನ್ ಇತ್ತು. ಚರ್ಚೆ ಮಾಡತಕ್ಕಂಥ ವಿಷಯಗಳ ಬಗ್ಗೆ ಚರ್ಚೆ ಮಾಡದಂತೆ ಹೌಸ್‌ನ್ನು ತಡೆ ಹಿಡಿದಿರತಕ್ಕಂಥ ವಿಷಯ ಇವತ್ತಿನ ದಿವಸ ಎಲ್ಲಾ ಮೀಡಿಯಾಗಳ ಮೂಲಕ ಬರುತ್ತಿವೆ. ಇಡೀ ರಾಜ್ಯದ ಜನತೆಗೆ ಒಂದು ರೀತಿಯ ಬೇಸರ ಬರುವ ಹಾಗೆ ವರ್ತನೆ ಮಾಡಿದ್ದಾರೆಂದು ಮಾನ್ಯ ಧರ್ಮಸಿಂಗ್ ರವರ ಮೇಲೂ ಕೂಡ ಇವತ್ತಿನ ದಿವಸ ಜನ ಶಾಪ ಹಾಕತಕ್ಕಂಥ ಸ್ಥಿತಿ ಆಗಿದೆ. ಆ ದೃಷ್ಟಿಯಿಂದ ಮಾನ್ಯ ಧರ್ಮಸಿಂಗ್‌ರವರು ಎಚ್ಚೆತ್ತುಕೊಂಡು ಇವತ್ತು ಇವರೆಲ್ಲರನ್ನೂ ಕರೆದುಕೊಂಡು ಸ್ವಸ್ಥಾನಕ್ಕೆ ಹೋಗಬೇಕು. ಮತ್ತೆ ಡಿಬೇಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತೆ ಡಿಬೇಟ್ ಮಾಡುವುದಕ್ಕೆ ಸಾಕಷ್ಟು ಸಬ್‌ಜೆಕ್ಟ್ ನಮ್ಮ ಮುಂದೆ ಇವೆ. ಸುಮಾರು 45 ಸಾವಿರ ಕೋಟಿ ರೂಪಾಯಿಗಳು ಚರ್ಚೆಯಾಗದೆ ಗಿಲೆಟಿನ್‌ಗೆ ಹಾಕಿ ಹೋಗುವಂಥ ಅವಶ್ಯಕತೆ ಇಲ್ಲ. ಇಲ್ಲದಿದ್ದರೆ ಈ ರಾಜ್ಯಕ್ಕೆ ನಾವು ಮಾಡಿದಂಥ ದ್ರೋಹ ಆಗುತ್ತದೆ. ಆದ್ದರಿಂದ ದಯವಿಟ್ಟು ಅರ್ಥಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು ಇದನ್ನು ಅವರು ಅರ್ಥ ಮಾಡಿಕೊಂಡು ತತ್‌ಕ್ಷಣ ಹೋಗುತ್ತಾರೆಂದು ಮತ್ತು ಡಿಬೇಟ್ ಆಗುತ್ತದೆಂದು ಹಾಗೂ ಇನ್ನು ಎರಡು ದಿವಸ ಸದನ ಅತ್ಯಂತ ಚೆನ್ನಾಗಿ ನಡೆಯುತ್ತದೆಂದು ನಾನು ಆಶಿಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ಬಹಳಷ್ಟು ವಿಷಯಗಳನ್ನು ಈ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ.

(ಅಡಚಣೆ)

ಎನು 'ಓ' ಎಂದು ಕೂಗುತ್ತೀರಿ? ನಿಮ್ಮನ್ನೆಲ್ಲಾ ಇವತ್ತಿನ ದಿವಸ ಕರ್ನಾಟಕ ರಾಜ್ಯದ ಜನತೆ ನೋಡುತ್ತಿದ್ದಾರೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. 'ಓ' ಎಂದು ನನ್ನ ಬಾಯಿ ಮುಚ್ಚಿಸುವುದಲ್ಲ. ಕರ್ನಾಟಕ ರಾಜ್ಯದ ಜನತೆಯ ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಿ. ಇದಕ್ಕಿಂತ ಹೆಚ್ಚಾಗಿ ನಾವೂ ಕೂಡ 'ಓ' ಎಂದು ಕೂಗಬಹುದು. ಸದನದ ಬಾವಿಯಲ್ಲಿ ತಾವುಗಳು ನಿಂತುಕೊಂಡಿದ್ದೀರಿ. ಆದ್ದರಿಂದ ನೀವು ಮೊದಲು ಇದರ ಬಗ್ಗೆ ತಿಳಿದುಕೊಳ್ಳಿ, ಮೊದಲು ನಿಯಮವನ್ನು ತಿಳಿದುಕೊಳ್ಳಿ. ದಯವಿಟ್ಟು ಇರತಕ್ಕಂಥ ನಿಯಮವನ್ನು ತಾವುಗಳು ಪಾಲನೆ ಮಾಡಿ. ಆ ನಂತರ 'ಓ' ಎಂದು ಮಾತನಾಡಿ. 'ಓ' ಎಂದು ಹೇಳುವುದಾದರೆ ಸದನದ ಹೊರಗಡೆ ಬನ್ನಿ. ಅಮೇಲೆ ಮಾತನಾಡೋಣ. ಬಾವಿಯಲ್ಲಿದ್ದು ಯಾರೂ ಕೂಡ ಮಾತನಾಡುವಂತಿಲ್ಲ. ತಾವು ಅನುಭವಿಗಳು ಇಷ್ಟು ವರ್ಷ ಈ ಸದನದಲ್ಲಿದ್ದೀರಿ. ಆದ್ದರಿಂದ ನೀವು ನಮಗೆ ಪಾಠವನ್ನು ಹೇಳಿಕೊಡಬೇಕು. ನಮಗೆ ಪಾಠ ಹೇಳಿಕೊಡತಕ್ಕಂಥ ನೀವೇ ಈ ರೀತಿಯಾಗಿ ನಮಗೆ ಪಾಠ ಕಲಿಸುವುದಕ್ಕೆ ಪ್ರಯತ್ನ ಮಾಡಿದರೆ ತುಂಬಾ ತಪ್ಪಾಗುತ್ತದೆ. ಇವತ್ತು ಇಲ್ಲಿ ಮಾಜಿ ಮುಖ್ಯಮಂತ್ರಿಗಳು ಮತ್ತು ಹಿರಿಯರೆಲ್ಲರೂ ಕೂಡ ಅಲ್ಲಿದ್ದೀರಿ. ಆದರೆ, ನೀವು ಅವರ ಜೊತೆಯಲ್ಲಿ ನಿಂತುಕೊಂಡು 'ಓ' ಎಂದು ಕೂಗತಕ್ಕಂಥದ್ದು ಸಭ್ಯತೆಯೇ? ಶೋಭೆ ತರುತ್ತದೆಯೇ? ಇದರ ಬಗ್ಗೆ ನೀವೇ ಯೋಚನೆ ಮಾಡಿ. ಈ ಒಂದು ವಿಚಾರದಲ್ಲಿ ನಾವು ಬಹಳಷ್ಟು ಸಮಯವನ್ನು ಈಗಾಗಲೇ ಹಾಳು ಮಾಡಿದ್ದೇವೆ. ಇವತ್ತು ಇನ್ನೂ ಬೇಡಿಕೆಯ ಮೇಲೆ ಚರ್ಚೆ ಮಾಡಬೇಕಾಗಿದೆ. ಸುಮಾರು 45 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮೇಲೆ ಚರ್ಚೆ ಮಾಡಿ ಪಾಸ್ ಮಾಡಬೇಕಾಗಿದೆ. ನಾನು ಹೇಳುವುದಕ್ಕೆ ಅವಕಾಸ ಕೊಡಿ. ಸದನದ ಬಾವಿಯೊಳಗೆ ನಿಂತುಕೊಂಡು ಈ ರೀತಿಯಾಗಿ ಮಾತನಾಡಬಾರದು. ವೆಲ್‌ನಲ್ಲಿ ನಿಂತುಕೊಂಡು ಹೇಗೆ ಮಾತನಾಡುತ್ತೀರಿ? ಮಾನ್ಯ ಅಧ್ಯಕ್ಷರೆ, ನೀವು ನಮಗೆ ರಕ್ಷಣೆ ಕೊಡಬೇಕು. ನಿಮಗೆ ಇವರು ಒತ್ತಾಯ ಮಾಡಿ ಇದೇ ರೀತಿಯಾಗಿ ಆಗಬೇಕೆಂದು ಹೇಳುತ್ತಿದ್ದಾರೆ. ಜನತೆಗೋಸ್ಕರ ನಾವು ಏನು ಮಾಡಬೇಕೆಂಬುದರ ಬಗ್ಗೆ ನಾನು ಮಾತನಾಡುವುದಕ್ಕೋಸ್ಕರ ಇವರು ಏಕೆ ನನಗೆ ಅವಕಾಶ ಮಾಡಿಕೊಡುತ್ತಿಲ್ಲ? ಮಾನ್ಯ ಸಭಾಧ್ಯಕ್ಷರೆ, ನಾನು ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಮಾಡಿಕೊಡಬೇಕು. ಬಾವಿಯಲ್ಲಿ ನಿಂತುಕೊಂಡು ಈ ರೀತಿಯಾಗಿ ಪ್ರವರ್ತನೆ ಮಾಡತಕ್ಕಂಥದ್ದು ಒಳ್ಳೆಯದೇ ಅಥವಾ ಶೋಭೆ ತರುತ್ತದೆಯೋ ಅಥವಾ ಇಲ್ಲವೇ ಎಂದು ತಾವು ಇವರಿಗೆ ಹೇಳಬೇಕು. ನಾನು ಈ ಸಂದರ್ಭದಲ್ಲಿ

ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ತಾವುಗಳು ಸದನದ ಬಾವಿಯಲ್ಲಿದ್ದೀರಿ. ಆದ್ದರಿಂದ ಸದನದ ನಿಯಮವನ್ನು ಚಾಚುತಪ್ಪದೆ ಪಾಲನೆ ಮಾಡಿ ನಮಗೂ ಕೂಡ ಮಾರ್ಗದರ್ಶನ ಮಾಡಿಕೊಡಿ. ನೀವೇ ಈ ರೀತಿಯಾಗಿ ದಾರಿ ತಪ್ಪಿಸಿದರೆ ಮುಂದಿನ ದಿವಸಗಳಲ್ಲಿ ನಮ್ಮ ಕತೆ ಏನಾಗಬೇಕು? ನಾನು ಕೈಮುಗಿದು ಕೇಳಿಕೊಳ್ಳುವುದೇನೆಂದರೆ ತಾವುಗಳು ಸದನದ ಬಾವಿಯಲ್ಲಿದ್ದೀರಿ. ಆದ್ದರಿಂದ ಸದನದ ನಿಯಮವನ್ನು ಚಾಚೂತಪ್ಪದೆ ಪಾಲನೆ ಮಾಡಿ ನಮಗೂ ಕೂಡ ಮಾರ್ಗದರ್ಶನ ಮಾಡಿಕೊಡಿ. ನೀವೇ ಈ ರೀತಿಯಾಗಿ ದಾರಿ ತಪ್ಪಿಸಿದರೆ ಮುಂದಿನ ದಿವಸಗಳಲ್ಲಿ ನಮ್ಮ ಕತೆ ಏನಾಗಬೇಕು? ನಾನು ಕೈಮುಗಿದು ಕೇಳಿ ಕೊಳ್ಳುವುದೇನೆಂದರೆ ತಾವುಗಳು ಸದನದ ಬಾವಿಯಲ್ಲಿದ್ದೀರಿ. ಆದ್ದರಿಂದ ದಯವಿಟ್ಟು ಯಾರೂ ಏನನ್ನೂ ಕೂಡ ಮಾತನಾಡುವುದಕ್ಕೆ ಹೋಗಬೇಡಿ. ಈ ಸದನದಲ್ಲಿ ಭ್ರಷ್ಟಾಚಾರದ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೀರಿ. ಹಾಗೆಯೇ ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದೀರಿ. ಮತ್ತೆ ಮತ್ತೆ ಅದನ್ನೇ ಪುನರಾವರ್ತನೆ ಮಾಡುವ ಬದಲು ಇವತ್ತಿನ ದಿವಸ ಬೇಡಿಕೆಯ ಮೇಲೆ ನಾವುಗಳು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ಇವತ್ತು ಸರ್ಕಾರ ಏನೊಂದು ಹಣವನ್ನು ವಿನಿಯೋಗ ಮಾಡಬೇಕೆಂದು ಇದೆ ಮತ್ತು ಇದರಿಂದ ಜನರಿಗೆ ಏನೇನು ಅನುಕೂಲವಾಗಬೇಕೆಂದು ಇದೆ ಅದರ ಬಗ್ಗೆ ಚರ್ಚೆ ಮಾಡಿ ಮಾನ್ಯ ನಾಗಮಾರಪಲ್ಲಿಯವರೇ, ತಾವು ಹಿರಿಯರಿದ್ದು ಈ ರೀತಿಯಾಗಿ ತಾವು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಬಸವರಾಜ್‌ರವರೆ, ತಾವು ಒಂದೇ ಒಂದು ನಿಮಿಷ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಹೆಚ್.ಡಿ. ಬಸವರಾಜ್: ದಯವಿಟ್ಟು ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ನಮ್ಮ ಅಭಿಪ್ರಾಯಗಳನ್ನು ನಾವು ಹೇಳಬೇಕಾಗುತ್ತದೆ. ನೀವು ಮಾತನಾಡುವಾಗ ನಾವು ಮಾತನಾಡಿದ್ದೇವೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಮಾತನಾಡಿದ್ದು ಆಯಿತಲ್ಲವೇ?

ಶ್ರೀ ಹೆಚ್.ಡಿ. ಬಸವರಾಜ್: ಇನ್ನೂ ಆಗಿಲ್ಲ. ನಾನು ಮಾತನಾಡುವುದಕ್ಕೆ ಇನ್ನೂ ಪ್ರಾರಂಭವೇ ಮಾಡಿಲ್ಲ.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರು ಇನ್ನೂ ಪ್ರಾರಂಭವೇ ಮಾಡಿಲ್ಲವೆಂದು ಹೇಳುತ್ತಿದ್ದಾರೆ.

(ಅಡಚಣೆ)

ಅಧ್ಯಕ್ಷರು: ಈಗ ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರ್‌ರವರು ಏನು ಹೇಳುತ್ತಾರೆಂಬುದನ್ನು ಕೇಳೋಣ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಇಲಾಖೆ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಈ ಸಂಸದೀಯ ವ್ಯವಹಾರಗಳಲ್ಲಿ ಮತ್ತು ಈ ಸದನವನ್ನು ನಡೆಸುವಂಥ ಸಂದರ್ಭದಲ್ಲಿ ನಮ್ಮ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇರುತ್ತದೆಯೋ ಅಷ್ಟೇ ಗುರುತರವಾದಂಥ ಜವಾಬ್ದಾರಿ ವಿರೋಧ ಪಕ್ಷದವರಿಗೂ ಕೂಡ ಇರುತ್ತದೆ. ಆ ಕಾರಣಕ್ಕಾಗಿ ಅವರ ಜೊತೆಗೆ ನಾವು ಸಹಕರಿಸಿ ಆಡಳಿತವನ್ನು ನಡೆಸುವಾಗ ಮತ್ತು ನಮ್ಮ ಸರ್ಕಾರದ ನೀತಿ ನಿರೂಪಣೆ ಮಾಡುವಾಗ ಯಾವುದಾದರೂ ಆರೋಪಗಳು ಬಂದಂಥ ಸಂದರ್ಭದಲ್ಲಿ ಅದಕ್ಕೆ ತಕ್ಕ ಉತ್ತರಗಳನ್ನು ಕೊಡಬೇಕೆಂದು ವಿರೋಧಪಕ್ಷದವರು ಕೇಳತಕ್ಕಂಥದರಲ್ಲಿ ಯಾವುದೇ ರೀತಿಯ ತಪ್ಪುಗಳು ಇಲ್ಲ. ಮತ್ತೆ ಅದರ ಮೂಲಕವಾಗಿ ನಾವು ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಹಾಗೆಯೇ ಸರ್ಕಾರ ತನ್ನ ನಿಲುವನ್ನು ಪ್ರಕಟಪಡಿಸಬೇಕಾಗುತ್ತದೆ. ಈ ಒಂದು ಸಂದರ್ಭಗಳಲ್ಲಿ ಬಹುಮತ ಇಲ್ಲವೆಂಬ ಕಾರಣಕ್ಕಾಗಿಯೇ ನಾವು ಅವರನ್ನು ಕಡೆಗಣಿಸಬೇಕೆಂಬುದು ಕೂಡ ಏನೂ ಇಲ್ಲ. ಹಿರಿಯರು ಈ ನಾಯಕತ್ವವನ್ನು ತಾವು ವಹಿಸಿಕೊಂಡಿದ್ದೀರಿ. ಪ್ರಾಯಶಃ ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಸುದೀರ್ಘವಾದ ಅವಧಿಯನ್ನು ಅಂದರೆ ತಮ್ಮ ಇಡೀ ಯೌವ್ವನದ ಅವಧಿಯನ್ನು ಕೂಡ ಈ ಸಭೆಯಲ್ಲಿ ಕಳೆದಿದ್ದಾರೆ. ಹಾಗೆಯೇ, ಅನೇಕ ಹಿರಿಯರೂ ಕೂಡ ಇಲ್ಲಿದ್ದಾರೆ. ಆದ್ದರಿಂದ ಈ ತರಹದ ಧರಣಿ ಮೂಲಕವಾಗಿ ನಾವು ಕಾರ್ಯಕಲಾಪಗಳನ್ನು ಅಡ್ಡಿಪಡಿಸಬಾರದು. ಹಿಂದೆ ಅನೇಕ ಸಂದರ್ಭಗಳಲ್ಲಿ ತಾವು ಕೂಡ ಇಂಥ ವಿಚಾರಗಳಲ್ಲಿ ನಿಲುವು ತೆಗೆದುಕೊಂಡಿದ್ದೀರಿ. ಮತ್ತೆ ಬಹಳ ವರ್ಷಗಳ ಕಾಲ ತಾವು ಆಡಳಿತವನ್ನು ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಪದೇಪದೇ ಹೇಳಿದ್ದೇನೆ. ಮಾನ್ಯ ಜೆ.ಹೆಚ್. ಪಟೇಲ್‌ರವರು ತಮಾಷೆಯಾಗಿ ಒಂದು ಮಾತನ್ನು ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಧರಣಿ ಮಾಡುವುದೆಂದು ನೆಲ ಹಿಡಿಯುವುದೆಂದು ಮಾನ್ಯ ಜೆ.ಹೆಚ್. ಪಟೇಲ್‌ರವರು ಹೇಳುತ್ತಿದ್ದರು. ನಮ್ಮ ಕುಸ್ತಿಯ ಆಟದಲ್ಲಿ ನೆಲ ಹಿಡಿಯುವವರನ್ನು ಒಗೆಯುವುದು ಬಹಳ ಕಷ್ಟ. ಏಕೆಂದರೆ ಅವರು ಮೇಲಕ್ಕೆ ಎದ್ದು ಆಡಿದರೆ ನಾವು ಅವರ ಬೆನ್ನಿಗೆ ಕಟ್ಟಿಕೊಂಡು ಒಗೆಯಬಹುದು. ಆದರೆ, ಅವರು ನೆಲವನ್ನು ಹಿಡಿದಾಗ ನಾವು ಏನು ಮಾಡಿದರೂ ಕೂಡ ಒಗೆಯುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ ಯಾವ ಕಡೆಯಿಂದಲೂ ಸರಿ ಹೋಗುವುದಿಲ್ಲ. ಆದ್ದರಿಂದ, ಇವತ್ತು ಅವರು ಈ ಪಟ್ಟನ್ನು ಪ್ರದರ್ಶನ ಮಾಡಿದ್ದಕ್ಕೆ ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹಾಗೂ ಮಾನ್ಯ ರಾಜೇಂದ್ರನ್‌ರವರೆಲ್ಲರೂ ಮಾತನಾಡಿ ಇದೊಂದು ಅಂತಿಮವಾದಂಥ ರೂಪಕ್ಕೆ ಬಂದು ಸದನದ

ಕಾರ್ಯಕಲಾಪಗಳು ಸರಿಯಾದಂಥ ರೀತಿಯಲ್ಲಿ ನಡೆಯಬೇಕೆಂದು ಅವರ ಮನವೊಲಿಸಿ ಮತ್ತು ನಮ್ಮಲ್ಲರಿಗೂ ಹೇಳಿ ಅನಂತರ ತಮ್ಮ ಮನವೊಲಿಸಿ ಈ ದಿವಸ ನಾವೆಲ್ಲರೂ ಕುಳಿತು ಈ ವಿಚಾರವನ್ನು ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟವು. ಬಿಎಂಐಸಿ ವಿಚಾರದಲ್ಲಿ ನಮ್ಮ ನಿಲುವು ಏನಿತ್ತೋ ಅದನ್ನು ಮಾಡಲಾಗಿದೆ. ಆದ್ದರಿಂದ ಸಿಬಿಐ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ. ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕೆಂದು ನಾವು ಈಗಾಗಲೇ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೆವು. ಆದ್ದರಿಂದ ನ್ಯಾಯಾಂಗ ತನಿಖೆಗೆ ಸಂಬಂಧಪಟ್ಟಂಥ ಅಧಿಸೂಚನೆಯನ್ನೂ ಕೂಡ ಹೊರಡಿಸಿದ್ದೇವೆ. ಅದಕ್ಕೆ ನೇಮಕಾತಿ ಮಾಡಿದಂಥ ಜಮ್ಮುಕಾಶ್ಮೀರ್ ಮತ್ತು ದೆಹಲಿಯ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದಂಥ ಮಾನ್ಯ ಬಿ.ಸಿ. ಪಟೇಲ್‌ರವರು ಇದಕ್ಕೆ ಒಪ್ಪಿಗೆ ಕೂಡ ಕೊಟ್ಟಿದ್ದಾರೆ. 17ನೇ ತಾರೀಖಿನ ದಿವಸ ಅವರು ಇಲ್ಲಿಗೆ ಬಂದು 18ನೇ ತಾರೀಖಿನಿಂದ ಕಾರ್ಯ ಪ್ರಾರಂಭ ಮಾಡುತ್ತಾರೆ. ಆದ್ದರಿಂದ ನಾವು ಇದರಿಂದ ಹಿಂದೆ ಸರಿಯತಕ್ಕಂಥ ಪ್ರಶ್ನೆ ಇಲ್ಲ. ಆದ್ದರಿಂದ ಇದಕ್ಕೆ ದಯವಿಟ್ಟು ಸಹಕರಿಸಿ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ತಮ್ಮ ನೇತೃತ್ವದಲ್ಲಿ ನಡೆದಂಥ ಸಭೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆ ಸಂದರ್ಭದಲ್ಲಿ ನಮ್ಮ ಪಕ್ಷದ ಸದಸ್ಯರ ಜೊತೆ ಮಾತನಾಡಿ ನಮ್ಮ ನಿರ್ಧಾರ ಏನೆಂಬುದನ್ನು ನಿಮಗೆ ತಿಳಿಸುತ್ತೇವೆಂದು ಮಾನ್ಯ ಧರ್ಮಸಿಂಗ್‌ರವರು ಹಾಗೂ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ನಂತರ ಇದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿ ಇದರ ಬಗ್ಗೆ ಚರ್ಚೆಯಾಗಲೆಂದು ಹೇಳಿದರು. ನೀವೂ ಹಠ ಮಾಡಿದರೆ ನಾವೂ ಕೂಡ ಹಠ ಮಾಡತಕ್ಕಂಥದ್ದು ಆಗಬಾರದು. ಆದ್ದರಿಂದ ಈ ವಿಷಯ ನಿಯಮ 69ರ ಅಡಿಯಲ್ಲಿ ಚರ್ಚೆಯಾಗಲಿ. ಆ ಸಂದರ್ಭದಲ್ಲಿ ಎಲ್ಲಾ ವಿಷಯಗಳು ಬಯಲಿಗೆ ಬರುತ್ತವೆ. ವಿಷಯಗಳು ಬಯಲಿಗೆ ಬಂದಂಥ ಸಂದರ್ಭದಲ್ಲಿ ಸರ್ಕಾರದ ಕಡೆಯಿಂದ ಏನು ಸ್ಪಷ್ಟವಾದ ಉತ್ತರ ಕೊಡುವುದಕ್ಕೂ ಕೂಡ ನಿಮಗೆ ಅವಕಾಶ ಇರುತ್ತದೆ. ಮತ್ತೆ ಬೇರೆಯವರಿಗೂ ಕೂಡ ಅವಕಾಶ ಸಿಗುತ್ತದೆ. ನಿಲುವಳಿ ಸೂಚನೆಯಲ್ಲಿ ಆದರೆ ಕೇವಲ ಸಹಿ ಹಾಕಿರತಕ್ಕಂಥ ಕೇವಲ 10 ಮಂದಿ ಮಾತ್ರ ಮಾತನಾಡುವುದಕ್ಕೆ ಅವಕಾಶ ಇರುತ್ತದೆ. ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಿದಾಗ ಸಭೆಯ ಈ ಕಡೆ ಮತ್ತು ಆ ಕಡೆಯ ಇರತಕ್ಕಂಥ ಸದಸ್ಯರೆಲ್ಲರೂ ಕೂಡ ಭಾಗವಹಿಸಬಹುದೆಂಬ ಕಾರಣಕ್ಕಾಗಿಯೇ ಒಂದು ರಚನಾತ್ಮಕವಾದ ಒಂದು ಸಲಹೆಯನ್ನು ಅವರು ಇಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ನಾನು ಹೇಳುವಾಗ ಪ್ರತಿಯೊಂದಕ್ಕೂ ನೀವು ಕಾನೂನಿನ ಪುಸ್ತಕವನ್ನು ತೋರಿಸಬಾರದೆಂದು ದಯವಿಟ್ಟು ತಾವುಗಳು ಅನ್ಯಥಾ ಭಾವಿಸಬಾರದು. ಈ ವಿಚಾರದಲ್ಲಿ ಸಂಪೂರ್ಣವಾದಂಥ

ಪರಿಶೀಲನೆಗೆ ಮುಕ್ತ ಮನಸ್ಸಿನಿಂದ ನಾವು ಇದ್ದೇವೆ. ಈ ಮಾತನ್ನು ಹೇಳುತ್ತಾ, ಕೆಲವು ತಾಂತ್ರಿಕ ತೊಂದರೆ ಇದರಲ್ಲಿ ಇದೆ ಎನ್ನತಕ್ಕಂಥದ್ದನ್ನೂ ಕೂಡ ತಮ್ಮ ಗಮನಕ್ಕೆ ತರತಕ್ಕಂಥ ಪ್ರಯತ್ನವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಕೊನೆಗೆ ನೀವು ನನ್ನ ವಾದವನ್ನು ಒಪ್ಪುತ್ತೀರೆಂದು ನಾನು ಬಲ್ಲೆ. ಏಕೆಂದರೆ, ಇದನ್ನು ಕಾನೂನಿನ ಅನುಗುಣವಾಗಿ ನೀವು ಮಾಡಿರುವುದರಿಂದ ಒಪ್ಪಿಕೊಳ್ಳುತ್ತೀರೆಂದು ತಿಳಿದುಕೊಂಡಿದ್ದೇನೆ. ಈಗ ಇರತಕ್ಕಂಥ ಪ್ರಶ್ನೆ ಏನೆಂದರೆ, ನಾವು ಅದಕ್ಕೆ ಮುಕ್ತ ಮನಸ್ಸಿನಿಂದ ಇದ್ದೇವೆ. ಮಾನ್ಯ ಅಧ್ಯಕ್ಷರೆ, ತಾವು ಈ ನಿಲುವಳಿ ಸೂಚನೆಯನ್ನು ಕೊಟ್ಟಂಥ ಸಂದರ್ಭದಲ್ಲಿ ಆ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳತಕ್ಕಂಥದ್ದು ಹೌದೇ ಅಥವಾ ಅಲ್ಲವೇ, ಅದಕ್ಕೆ ಅರ್ಹತೆ ಇದೆಯೇ ಅಥವಾ ಇಲ್ಲವೇ ಮತ್ತು ಅದರ ಅಡ್ಮಿಸಬಿಲಿಟಿ ಎಂದು ನಾವು ಏನು ಕರೆಯುತ್ತೇವೆ, ಅದನ್ನು ಸ್ವೀಕಾರ ಮಾಡತಕ್ಕಂಥ ಅಧಿಕಾರ ತಮಗೆ ಇರುತ್ತದೆ. ಮತ್ತು ಅದೇ ಸಂದರ್ಭದಲ್ಲಿ ತಾವು ಅದನ್ನು ಬೇರೆ ರೂಪದಲ್ಲಿ ಪರಿವರ್ತನೆ ಮಾಡತಕ್ಕಂಥ ಅಧಿಕಾರ ಕೂಡ ತಮಗೆ ಇರುತ್ತದೆ. ಯಾವಾಗಲೂ ಕೂಡ ನಾವು ಆ ಸಂದರ್ಭ ಬಂದಾಗ, ಅದನ್ನು ಪರಿವರ್ತನೆ ಮಾಡಿ ಮನಪರಿವರ್ತನೆ ಮಾಡಿ ಎಲ್ಲರನ್ನೂ ಭಾಗವಹಿಸುವಂತೆ ತಾವು ಮಾಡಿದ್ದೀರಿ, ಎಲ್ಲರೂ ಕೂಡ ಸಹಕಾರ ಕೊಟ್ಟಿದ್ದಾರೆ. ಅದಕ್ಕಾಗಿ ನಾವು ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳಿಗೆ ವಿರೋಧ ಪಕ್ಷ ಅಲ್ಲದೆ ಇದ್ದರೂ ಕೂಡ ಬೇರೆ ಬೇರೆ ಪಕ್ಷದ ಮುಖಂಡರುಗಳಿಗೂ ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ, ತಾವು ನಿನ್ನೆ ದಿವಸ ಕೊಟ್ಟು ಹೋದ ಮೇಲೆ ಅದನ್ನು ತಾವು ನಿಯಮ–69ಕ್ಕೆ ಪರಿವರ್ತನೆ ಮಾಡಿದ್ದೇನೆಂದು ಹೇಳಲಿಲ್ಲ. ಅದರ ಬೇಡಿಕೆ ಕೂಡ ಇರಲಿಲ್ಲ. ಆಗ ಅವರು ಧರಣಿ ಒಂದು ಕಾರಣವನ್ನು ತೆಗೆದುಕೊಂಡು ಬಂದು ಈ ಸಭಾ ಕಲಾಪಗಳನ್ನು ಮುಂದುವರೆಸುವುದಕ್ಕೆ ನಾವು ಬಿಡುವುದಿಲ್ಲ ಎನ್ನುವಂಥ ತಮ್ಮದೇ ಆದಂಥ ನಿಲುವನ್ನು ಅವರು ತೆಗೆದುಕೊಂಡಿದ್ದಾರೆ. ಅದಕ್ಕೆ ನಾವು ಆಕ್ಷೇಪಣೆ ಮಾಡುವುದಕ್ಕಿಂತ, ಅವರಲ್ಲಿ ನಾವು ವಿನಯಪೂರ್ವಕವಾಗಿ ಕೇಳಿಕೊಂಡೆವು. ಈಗ ಅದು ಆಗಬೇಕಾಗಿದ್ದರೆ, ತಾವು ಅದನ್ನು ಪರಿವರ್ತನೆ ಮಾಡಬೇಕಾಗಿದ್ದರೆ ಹೊಸದಾಗಿ, ಅದಕ್ಕಾಗಿಯೇ ತಾವು ಮತ್ತೆ ಒಂದು ನೋಟೀಸ್‌ನ್ನು ಕೊಡಬೇಕಾಗುತ್ತದೆ. ನಿಯಮ–69 ಏನು ಹೇಳುತ್ತದೆಂದರೆ, ಚರ್ಚೆ ನಡೆಸಲು ಸೂಚನೆ ಕೊಡಬೇಕು, ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಆಪೇಕ್ಷಿಸುವ ಯಾರಾದರೊಬ್ಬರು ಸದಸ್ಯರು ಅವರು ಚರ್ಚೆಗೆ ತರಬೇಕೆಂದಿರುವ ವಿಷಯವನ್ನು ಸ್ಪಷ್ಟವಾಗಿಯೂ ಮತ್ತು ನಿರ್ದಿಷ್ಟವಾಗಿಯೂ ನಮೂದಿಸಿರುವ ಬರಹ ಮೂಲಕವಾದ ಸೂಚನೆಯನ್ನು ಕಾಯದರ್ಶಿಯವರಿಗೆ ಕೊಡಬಹುದು. ಅಲ್ಲದೆ ಆ ಸೂಚನೆಯೊಂದಿಗೆ ಆ ವಿಷಯದ ಸಂದರ್ಭದಲ್ಲಿ ಚರ್ಚೆ ನಡೆಸಲಿರುವ ಕಾರಣಗಳನ್ನು

ನಮೂದಿಸಿರುವ ವಿವರಣಾತ್ಮಕ ಟಿಪ್ಪಣಿಯನ್ನು ಸಹ ಕಳುಹಿಸಿ ಕೊಡಬೇಕು. ಅಷ್ಟೇ ಅಲ್ಲದೆ ಆ ಸೂಚನೆಗೆ ಕನಿಷ್ಟ ಬೇರೆ ಇಬ್ಬರು ಸದಸ್ಯರು ತಮ್ಮ ಸಹಿಗಳನ್ನು ಹಾಕುವುದರ ಮೂಲಕ ಬೆಂಬಲಿಸಲ್ಪಟ್ಟಿರಬೇಕು. ಈಗ ಸದನದಲ್ಲಿ ಬಹಳ ನೀರು ಹರಿದು ಹೋಗಿದೆ. ಅವತ್ತಿನ ಕಾಲಕ್ಕೆ ತಾವು ಅದನ್ನು ಪರಿವರ್ತನೆಗೊಳಿಸಲಿಲ್ಲ. ಇವತ್ತು ಅದನ್ನು ಪರಿವರ್ತನೆಗೊಳಿಸಬೇಕಾದರೆ ತಾವು ಅವತ್ತೇ ತಾವು ಒಂದು ಆದೇಶ ಅಥವಾ ತೀರ್ಮಾನವನ್ನು ಕೊಟ್ಟಿದ್ದರೆ ಅದು ಅವತ್ತಿಗೆ ಸರಿಯಾಗುತ್ತಿತ್ತು. ಅದೂ ಅಲ್ಲದೆ ಇರತಕ್ಕಂಥ ಕಾರಣಕ್ಕಾಗಿ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳತಕ್ಕಂಥದ್ದು ಈ ನಿಯಮಾವಳಿಗಳ ಪ್ರಕಾರ ತಾವು ಮುಂದೆ ತಾವು ಕ್ರಮ ಕೈಗೊಳ್ಳಬೇಕೆಂದು ಇಚ್ಚಿಸಿದಲ್ಲಿ, ಆ ರೀತಿಯಾಗಿ ತಾವು ಕ್ರಮ ಕೈಗೊಳ್ಳಿ. ಅದಕ್ಕೆ ಸರ್ಕಾರ ಏನು ಉತ್ತರ ಕೊಡಬೇಕು ಕೊಡುತ್ತದೆ. ನಾವೂ ಇಂತಹ ವಿಷಯದ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾಗಿದೆ. ಒಂದು ಗುರುತರವಾದ ಆಪಾದನೆ ಸರ್ಕಾರದ ಮೇಲೆ ಬಂದಿದೆ ಮತ್ತು ನನ್ನ ಮೇಲೆ ವೈಯಕ್ತಿಕವಾಗಿ ನಿಮ್ಮ ಪುತ್ರನನ್ನು ಸಂರಕ್ಷಿಸಲಿಕ್ಕಾಗಿ ಆ ವರ್ಗಾವರ್ಗಿಯನ್ನು ಮಾಡಿಸಿದ್ದೀರಿ ಎನ್ನುವಂಥ ಆಪಾದನೆ ಕೂಡ ಇದೆ. ನೀವು ಕೊಟ್ಟಿರುವ ನಿಲುವಳಿ ಸೂಚನೆಯಲ್ಲಿದೆ. ಮಾಡಿದ್ದು ತಪ್ಪೇನಿಲ್ಲ. ಅದಕ್ಕಾಗಿ ಆಪಾದನೆ ಮಾಡಿರುವುದಕ್ಕೆ ನಾನೂ ಕೂಡ ಉತ್ತರವನ್ನು ಕೊಡಬೇಕಾದದ್ದು ಇದೆ. ಅದನ್ನು ಎಷ್ಟು ಬೇಗನೆ ಹೊರಗಡೆಗೆ ಬರುತ್ತೇವೆ, ಎಷ್ಟು ಬೇಗನೆ ಈ ಆಪಾದನೆಗಳಿಂದ ಹೊರಗಡೆ ಬರುತ್ತೇವೆ, ಅಷ್ಟೂ ನಮ್ಮ ಸರ್ಕಾರಕ್ಕೂ ನಮಗೂ ಶ್ರೇಯಸ್ಕರವಾಗುತ್ತದೆ. ತಾವೂ ಕೂಡ ಒಂದು ಚರ್ಚೆಗೆ ತಾವು ಒಪ್ಪಿರುವ ಕಾರಣಕ್ಕಾಗಿಯೇ ನಾವು ಇದರ ಬಗ್ಗೆ ತಾವೂ ಕೂಡ ಯೋಚನೆ ಮಾಡಿ ತಾಂತ್ರಿಕ ಕಾರಣದ ಹಿನ್ನಲೆಯಲ್ಲಿ ನಾನು ಹೇಳಿದ್ದೇ ಸರಿ ಎಂದು ನಾನು ಒತ್ತಾಯ ಮಾಡುವುದಿಲ್ಲ. ಆದರೆ ತಾವೂ ಕೂಡ ಆಲೋಚಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತಾವು ನಾಳೆಯವರೆಗೆ ಅಧಿವೇಶನವನ್ನು ಮುಂದಕ್ಕೆ ಹಾಕಿ ಈ ಬಗ್ಗೆ ಚರ್ಚೆ ಮಾಡಿದರೆ ಪ್ರಾಯಶಃ ಒಂದು ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ, ಅದು ತಮ್ಮ ವಿವೇಚನೆಗೆ ಬಿಟ್ಟಿದ್ದು. ಆದರೆ ನಾಳೆಯವರೆಗೆ ಈ ಅಧಿವೇಶನವನ್ನು ಮುಂದಕ್ಕೆ ಹಾಕಿದರೆ ಪ್ರಾಯಶಃ ನಾವೆಲ್ಲರೂ ಕೂಡ ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಸಾಧ್ಯತೆಯಾಗುತ್ತದೆಂದು ಹೇಳಿ ತಮ್ಮಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ಇಲ್ಲಿ ತಂದಾಗ ತಾವು ಏನು ಮಾಡುತ್ತಿದ್ದೀರೆಂದರೆ, ನಿಲುವಳಿ ಸೂಚನೆಗೆ ಇಲ್ಲಿ ಒತ್ತಾಯ ಮಾಡುವುದಕ್ಕೆ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಸಮರ್ಥನೆ ಮಾಡುವುದಕ್ಕೆ ನೀವು ಅವಕಾಶವನ್ನು ಕೊಡುತ್ತಿದ್ದೀರಿ. ಈ ಸಾರಿ ವಿಶೇಷವಾಗಿ ಏನು ಮಾಡಿದಿರಿ ಎಂದರೆ, 11 ಗಂಟೆಗೆ ಸಭೆ ಸೇರಬೇಕಾಗಿತ್ತು.

12.15 ನಿಮಿಷವಾದರೂ ಸಭೆ ಸೇರಲಿಲ್ಲ. ಅಷ್ಟರೊಳಗಾಗಿ ನೀವು ಮೊದಲೇ ನಮಗೆ ಪತ್ರವನ್ನು ಬರೆದು ಕಳುಹಿಸಿ ಕೊಟ್ಟು ಬಿಟ್ಟಿರಿ. ಇದು ನಿಲುವಳಿ ಸೂಚನೆ ಆಗುವುದಿಲ್ಲವೆಂದು ಹೇಳಿ, ತಾಂತ್ರಿಕತೆ ಎಲ್ಲೋ ಒಂದು ಕಡೆ ಸ್ವಲ್ಪ ಯಡವಟ್ಟಾಗಿದೆ. ಆದ್ದರಿಂದ ನಾನು ತಮಗೆ ಹೇಳುತ್ತೇನೆ. ಇದು ತಾಂತ್ರಿಕತೆ ಮೇಲೆ ನಿಲ್ಲುವುದು ಅಲ್ಲ. ಮಾನ್ಯ ಪ್ರಕಾಶ್‌ರವರು ಬಹಳ ಚೆನ್ನಾಗಿ ಹೇಳಿದರು. ನಾವು ಇದರಿಂದ ಹೊರಗೆ ಬರಬೇಕಾಗಿದೆ. ಈ ಆಪಾದನೆಯಿಂದ ನಾವೂ ಹೊರಗೆ ಬರಬೇಕಾಗಿದೆ. ಇಲ್ಲಿ ಆಗ್ನಿ ಪರೀಕ್ಷೆಯಾಗಲೇಬೇಕು. ಈ ಆಗ್ನಿ ಪರೀಕ್ಷೆಯಾಗಬೇಕಾದರೆ, ಸಮಗ್ರವಾದಂಥ ಚಿಂತನೆ, ಮಂಥನೆ ಅಲ್ಲಿ ನಡೆಯ ಬೇಕಾಗುತ್ತದೆ. ಆದ್ದರಿಂದ ತಮಗೆ ಎಲ್ಲಾ ರೀತಿಯ ಸರ್ವ ಅಧಿಕಾರ ಇದೆ. ತಾವು ತಕ್ಷಣ ನಿಯಮ–69ರ ಪ್ರಕಾರ ನಾನು ಚರ್ಚೆಗೆ ಅವಕಾಶ ಕೊಟ್ಟಿದ್ದೇನೆಂದು ಹೇಳುವುದಕ್ಕೆ ಅಧಿಕಾರ ಇದೆ. ನಿಮ್ಮ ಅಧಿಕಾರವನ್ನು ಪ್ರಶ್ನೆ ಮಾಡುವುದಕ್ಕೆ ಯಾರಿಗೂ ಇಲ್ಲಿ ಅವಕಾಶವಿಲ್ಲ. ಆದ್ದರಿಂದ, ಒಂದು ಹಂತದಲ್ಲಿ 90 ಭಾಗ ಅವರು ಒಪ್ಪಿಕೊಂಡಿದ್ದಾರೆ. ನಿಯಮ–69ರ ಪ್ರಕಾರ ಇಲ್ಲಿ ಚರ್ಚೆಯಾಗಬೇಕು. ನಾವು ಅದರಿಂದ ಹೊರಗೆ ಬರಬೇಕಾಗಿದೆ. ಈ ಚರ್ಚೆಯಿಂದ ಬೆಳಕು ಚೆಲ್ಲಬೇಕೆಂದು ಅವರು ಒಪ್ಪಿಕೊಂಡಾಗ ನೀವು 10 ಭಾಗ ಕೂಡಿಕೊಂಡರೆ 100 ಭಾಗವಾಯಿತು. ತಕ್ಷಣ ನೀವು ಈಗ ನಿಯಮ–69ಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ತಕ್ಷಣ ಹೇಳಿ ನೀವು. ನಿಮಗೆ ಅವಕಾಶ ಇದೆ, ಬೇರೆ ಏನೂ ಮಾತಿಲ್ಲ. ನಿಮಗೆ ಈಗಾಗಲೇ ನಾವು ಒಂದು ಪತ್ರವನ್ನು ಕೊಡುತ್ತೇವೆ.

ಅಧ್ಯಕ್ಷರು: ಡಿಸಿಎಂರವರು ಏನು ಹೇಳುತ್ತಾರೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ ಈಗಾಗಲೇ ನಮ್ಮ ಕಾನೂನು ಮತ್ತು ಸಂಸದೀಯ ಸಚಿವರಾಗಿದ್ದಂಥ ಎಂ.ಪಿ. ಪ್ರಕಾಶ್‌ರವರು ಹೇಳಿದ ಹಾಗೆ ನಾವು ಈ ಸರ್ಕಾರ ಬಿಚ್ಚುಮನಸ್ಸಿನಿಂದ ಇದ್ದೇವೆ. ಯಾವುದೇ ಚರ್ಚೆಗೆ ತಾವು ವಿಚಾರಣೆಯನ್ನು ಮುಂದಿಟ್ಟರೆ ಅದಕ್ಕೆ ಉತ್ತರ ಕೊಡುವಂಥ ಶಕ್ತಿ ನಮಗೆ ಇದೆ. ಇದು ಪಾರದರ್ಶಕ ಸರ್ಕಾರ. ಯಾವುದನ್ನೂ ಮುಚ್ಚಿಡುವಂಥ ಪ್ರಶ್ನೆ ಇಲ್ಲ. ಈ ಮ್ಯಾಂಗನೀಸ್ ವಿಷಯದಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಅನೇಕ ರೀತಿಯ ಆರೋಪಗಳು ನಮಗೆ ಕೇಳಿ ಬರುತ್ತಿವೆ. ಅನೇಕ ರೀತಿಯ ದಂಧೆಗಳು ನಡೆಯುತ್ತಿವೆ ಎನ್ನುವುದರ ಬಗ್ಗೆ ನಾವು ಆ ಕಡೆ ಕುಳಿತಾಗಿ ಚರ್ಚೆ ಮಾಡಿದ್ದೇವೆ, ಈ ಕಡೆ ಇದ್ದಾಗ ಚರ್ಚೆ ಮಾಡಿದ್ದೇವೆ. ಬಹುಶಃ ಈ ಡಿಮ್ಯಾಂಡ್ ಸಂದರ್ಭದಲ್ಲಿಯೂ ಸಹ ಒಂದು ದಿವಸ ಪೂರ್ತಿ ಈ ಕರ್ಮಕಾಂಡದ ಬಗ್ಗೆ ಚರ್ಚೆಯಾದರೆ, ಅದಕ್ಕೆ ಪರಿಹಾರ ಹುಡುಕಿದರೆ, ಅದರಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂ.ಗಳು ಸೋರಿ ಹೋಗುವುದನ್ನು ತುಂಬಿದರೆ, ನಾನು ಹಣಕಾಸಿನ ಸಚಿವನಾಗಿ ಇದಕ್ಕಿಂತ ಸಂತೋಷ ಪಡುವವರು ಬೇರೆ

ಯಾರೂ ಇಲ್ಲ. ಅದಕ್ಕಾಗಿ ಈಗಾಗಲೇ ನಮ್ಮ ಸಂಸದೀಯ ಸಚಿವರು ಹೇಳಿದಂತೆ, ತಾವು ಈಗಾಗಲೇ ನಿಲುವಳಿ ಸೂಚನೆ ಮೂಲಕ ತಂದಂಥದ್ದನ್ನು ಇದನ್ನು ತಾವು ಪ್ರಾರಂಭದಲ್ಲೇ ಮಾನ್ಯ ವಾಟಾಳ್ ನಾಗರಾಜ್‌ರವರು ತಿಳಿಸಿದಂತೆ ಸಾಧ್ಯವಿಲ್ಲವೆಂದು ಹೇಳಿ ತಮ್ಮ ರೂಲಿಂಗ್ ಕೊಟ್ಟಾಗಿದೆ. ಬೇರೆ ರೂಪದಲ್ಲಿ ನೀವು ಚರ್ಚೆ ಮಾಡಬೇಕೆನ್ನುವ ಆಸಕ್ತಿ ನಿಮಗೆ ಇದ್ದರೆ, ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಬೇರೆ ನಿಯಮಾವಳಿ ಅನುಸಾರ ನಮ್ಮ ವಿರೋಧ ಪಕ್ಷದವರ ತಮ್ಮ ಅಹವಾಲನ್ನು ಮುಂದಿಡಲಿ. ಅಂತಿಮವಾಗಿ ತಾವು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಚರ್ಚೆಗೆ ನಾವು ಹಿಂದು ಮುಂದು ನೋಡುವ ಪ್ರಶ್ನೆಯೇ ಇಲ್ಲ. ವ್ಯಾಪಕವಾದ ಚರ್ಚೆಯಾಗಲಿ ಅದಕ್ಕೆ ನಾವು ಉತ್ತರವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ. ಅದಕ್ಕಾಗಿ ನಾವು ಏನಂತಿ ಮಾಡುವುದು, ನಮ್ಮ ವಿರೋಧ ಪಕ್ಷದ ನಾಯಕರು ಮಾಜಿ ಮುಖ್ಯ ಮಂತ್ರಿಗಳಾಗಿ ಸಚಿವರಾಗಿ ನಮ್ಮ ಧರ್ಮಸಿಂಗ್ ಹಾಗೂ ಮಲ್ಲಿಕಾರ್ಜುನ ಖರ್ಗೆಯವರ ಅನುಭವ ಇರುವಾಗ ನಾವು ಈ ರೀತಿಯ ಚರ್ಚೆಗೆ ಸಿದ್ಧರಿದ್ದೇವೆ. ನಾಳೆ ಬೇರೆಯ ರೂಪದಲ್ಲಿ ಒಂದು ನೋಟೀಸ್ ಕೊಡಲಿಕ್ಕೆ ಹೇಳಿದ ಮೇಲೆ ಉಳಿದಂಥ ಕಾರ್ಯಕಲಾಪ ನಡೆಯುವುದಕ್ಕಾದರೂ ನೀವು ಅವಕಾಶ ಮಾಡಿಕೊಡಿ. ಅಥವಾ ನಾಳೆಗೆ ಸದನವನ್ನು ಮುಂದೂಡಿ, ಅಂತಿಮವಾದ ತೀರ್ಮಾನ ನಿಮ್ಮದು. ನೀವು ಅಧ್ಯಕ್ಷರಾಗಿ ಏನು ತೀರ್ಪನ್ನು ಕೊಡುತ್ತೀರಿ, ಅದಕ್ಕೆ ನಾವು ಬದ್ಧರಿದ್ದೇವೆ. ಡಿಟೇಲ್ ಚರ್ಚೆಯಾಗಲಿ, ಈ ಮ್ಯಾಂಗನೀಸ್ ವ್ಯವಹಾರದ ವಿಷಯದಲ್ಲಿ ಅನೇಕ ವಿಷಯಗಳನ್ನು ನಾವು ಹೇಳುವುದು ಇದೆ. ಹಿಂದೆ ಸರ್ಕಾರ ಇದ್ದಾಗ ಏನೇನು ನಡೆಯಿತು. ಏನೇನು ಆಗಿದೆ. ಎಲ್ಲಾ ವಿವರವಾದ ಚರ್ಚೆಗಳನ್ನು ಮಾಡೋಣ. ಅದಕ್ಕೆ ಪರಿಹಾರ ಹುಡುಕುವಂಥ ಪರಿಹಾರವನ್ನು ಮಾಡೋಣ. ಈ ಸೋರಿಕೆಯನ್ನು ತಡೆದು ಸರ್ಕಾರದ ಬೊಕ್ಕಸಕ್ಕೆ ಹಣವನ್ನು ತುಂಬಿದರೆ ನಾನು ಹಣಕಾಸಿನ ಸಚಿವನಾಗಿ ತುಂಬಾ ಸಂತೋಷವಾಗುತ್ತದೆ. ರಾಜ್ಯದ ಜನತೆ ಸಹ ಇದನ್ನು ಮೆಚ್ಚುತ್ತಾರೆ. ನಾವು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಿದ್ಧರಿದ್ದೇವೆ. ನಾಳೆ ನಿಯಮ 69ರಲ್ಲಿ ತೆಗೆದುಕೊಳ್ಳಬೇಕೋ ಯಾವುದರಲ್ಲಿ ತೆಗೆದುಕೊಳ್ಳಬೇಕೋ ಇನ್ನೂ ಒಪ್ಪಿಗೆ ನಾವು ಕೊಟ್ಟಿಲ್ಲ, ನಾಳೆ ಅವರು ನೋಟೀಸ್‌ನ್ನು ಕೊಡಲಿ, ನಾಳೆ ನಿಮ್ಮ ಹತ್ತಿರ ಸಮಾಲೋಚನೆ ಮಾಡೋಣ. ಅಂತಿಮವಾದ ತೀರ್ಮಾನವನ್ನು ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು: ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಬೇರೆ ನಿಯಮಾವಳಿಗಳಲ್ಲಿ ಕೊಡಲಿ ನಾವು ಚರ್ಚೆಗೆ ಸಿದ್ದವೆಂದು. ಅದಕ್ಕೆ ಪೂರ್ಣ ಇಲ್ಲದಿದ್ದರೂ ಅದಕ್ಕೆ ಅಭಿಪ್ರಾಯ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಅದಕ್ಕಾಗಿ ನಾನು ಈ ಕಡೆ ಇರುವ ಎಲ್ಲಾ ಸದಸ್ಯರುಗಳಿಗೆ ಮನವಿ ಮಾಡುವುದೇನೆಂದರೆ, ನೀವು ಬೇರೆ ರೀತಿಯಲ್ಲಿ ಒಂದು

ಮೋಷನ್ ಕೊಡಿ, ಈಗ ಪ್ರಶ್ನೋತ್ತರ ಇರುವುದನ್ನು ಮುಗಿಸೋಣ. ನಾಳೆ ಎತ್ತಿಕೊಳ್ಳುತ್ತಿದ್ದ ಹಾಗೆ.

ಶ್ರೀ ವಾಟಾಳ್ ನಾಗರಾಜ್: ಸಾಧ್ಯವೇ ಇಲ್ಲ.

(ಅಡಚಣೆ)

ಅಧ್ಯಕ್ಷರು: ದಯಮಾಡಿ ಕೇಳಿ. ಇದನ್ನು ಬೇರೆ ಯಾವುದರ ಮೇಲೆ ಎತ್ತಿ ಕೊಳ್ಳುವುದು ಬೇಡ. ಇನ್ನೊಂದು ನೋಟೀಸ್ ಕೊಡಿ, I will consider.

ಶ್ರೀ ಜೆ.ಸಿ. ಮಾಧುಸ್ವಾಮಿ: ರೀ ಕನ್ಸಿಡರ್ ಮಾಡಿ, ಕನ್ವರ್ಟ್‌ನ್ನು ತಾವು ಮಾಡಬಹುದು.

ಅಧ್ಯಕ್ಷರು: ನಿಮ್ಮ ಮಾತನ್ನು ಕೇಳಿದ್ದೇನೆ, ನಮ್ಮ ಮಾತನ್ನು ಸ್ವಲ್ಪ ಕೇಳಿ. ಆದ್ದರಿಂದ ದಯಮಾಡಿ ನಾಳೆ ಕೊಡಿ. ಈಗ ಪ್ರಶ್ನೋತ್ತರ ಮುಗಿಸೋಣ. ನಾಳೆ ಅದನ್ನು, I will consider. ಇದು ಒಳ್ಳೆಯ ತಮಾಷೆಯಲ್ಲವೇ? ನನಗೂ ಸಮಯ ಬೇಕಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗ ಈ ಪ್ರಶ್ನೆಯನ್ನು ಇಷ್ಯೂ ಮಾಡಿಕೊಳ್ಳುವುದು ಬೇಡ. ನಮ್ಮ ಮೋಷನ್‌ನ್ನು ಡಿಸ್‌ಚಾರ್ಜ್ ಮಾಡಿದಿರೋ? ಅದಕ್ಕೆ ಕನಿಷ್ಟ ಪಕ್ಷ ಪ್ರಕಾಶ್‌ರವರೂ ಕೂಡ ಒಪ್ಪಿಕೊಳ್ಳುತ್ತಾರೆ. ಉಪ ಮುಖ್ಯಮಂತ್ರಿಗಳೂ ಕೂಡ ಒಪ್ಪಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಈಗ ನೋಟೀಸ್ ಕೊಡಿ. ನಾನು ಅದನ್ನು ನಾಳೆಗೆ ತೆಗೆದು ಕೊಳ್ಳುತ್ತೇನೆ. ಒಳ್ಳೆಯ ತಮಾಷೆ. ನಾನು ಪುಸ್ತಕವನ್ನು ಓದಬೇಕು. They have agreed.

ಶ್ರಿ ಬಿ.ಎಸ್. ಯಡಿಯೂರಪ್ಪ: ಸಾರ್, ಅವರ ಹತ್ತಿರ ಇವತ್ತೂ ಮಾಹಿತಿ ಇಲ್ಲ, ನಾಳೆಯೂ ಮಾಹಿತಿ ಇಲ್ಲ. ಪಾಪ ಅವರಿಗೆ ಸಮಾಧಾನವಾಗುವುದಿದ್ದರೆ ನಾಳೆಯೇ ಮಾತನಾಡಲಿ.

ಅಧ್ಯಕ್ಷರು: ನಾಳೆ ಪ್ರಶ್ನೋತ್ತರ ಇಲ್ಲದಿದ್ದರೆ ನಾಳೆ ಒಂದು ನೋಟೀಸ್ ಕೊಡಿ. ನಾಳೆ ತೆಗೆದುಕೊಳ್ಳೋಣ. ನಾನು ನಾಳೆ ಬೆಳಿಗ್ಗೆಯೇ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ. ದಯಮಾಡಿ ನೋಟೀಸ್ ಕೊಡಿ. ಈಗ ರೂಲಿಂಗ್ ಕೊಡಿ, ಅದು ಕೊಡಿ ಎಂದು ಹೇಳಬೇಡಿ, ಅದು ನೀವು ಹೇಳುವ ಹಾಗಿಲ್ಲ. ನೀವು ಹೇಳಿದ ಹಾಗೆ ಕೊಡುವುದಕ್ಕೆ ಮಾಡುವುದಕ್ಕೆ ಬರುವುದಿಲ್ಲ. ಈಗ ಏನಾಗಿದೆ ದಯಮಾಡಿ ಕೊಡಿ. Tomorrow I will take up. ಆಮೇಲೆ ಇನ್ನುಳಿದ ಪ್ರೊಸೀಡಿಂಗ್ಸ್ ಎಲ್ಲಾ ಮಾಡೋಣ.

Sri M. Mallikarjuna Kharge: Sir, you have got full power. You can suspend all rules and take up.

Mr. Speaker: Not right now. Let us take it tomorrow.

Sri M. Mallikarjuna Kharge: But, you have got power to suspend the rules and take it up. So, you can take it up.

ಅಧ್ಯಕ್ಷರು: ಆಯಿತು ತೆಗೆದುಕೊಳ್ಳೋಣ. ನಾಳೆ ಒಂದು ನೋಟೀಸ್ ಕೊಡಿ. ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 4 ಗಂಟೆ 1 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ನಾಳೆ 12ನೇ ಬುಧವಾರ 2006ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

* * * * *